ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಸಚಿನ್ ಶಂಕರ್ ಮಗದುಮ್

ಡಿವಿಜನಲ್ ಮ್ಯಾನೇಜರ್, ಮೆ || ದಿ ಓರಿಯಂಟಲ್ ಇನ್ಶೂರನ್ಸ್ ಕಂಪನಿ ಅಮಿಟೆಡ್ -ವಿರುದ್ದ-ರೇಯಾನ್ ಫರ್ನಾಂಡಿಸ್ ಮತ್ತು ಇನ್ನೊಬ್ಬರು*

ಸಂಕೀರ್ಣ ಪ್ರಥಮ ಅಪೀಲು ಸಂಖ್ಯೆ :7279/2016 (ಏ.ಮ್.ವಿ-I) ಇದರೊಂದಿಗೆ ಇತರೆ ದಿನಾಂಕ ೫ನೀ ಜನವರಿ 2021

ತೀರ್ಪು

ನ್ಯಾಯಮೂರ್ತಿ ಶ್ರೀ ಸಚಿನ್ ಶಂಕರ್ ಮಗದುಮ್:

ಹೆಸರಿಸಲಾದ ಅಪೀಲುಗಳನ್ನು, ಉಡುಪಿಯ ಪ್ರಧಾನ ಜಿಲ್ಲಾ ನ್ಯಾಯಾಧೀಶರು ಮತ್ತು ಸದಸ್ಯರು, ಮೋಟಾರು ವಾಹನ ಅಪಘಾತ ಕೇಮುಗಳ ನ್ಯಾಯಾಧಿಕರಣ ಇವರು ಎಮ್.ವಿ.ಸಿ.ಸಂಖ್ಯೆ: 230/2010 ರಲ್ಲಿ ಹೊರಡಿಸಿದದಿನಾಂಕ: 8.7.2010 ರ ತೀರ್ಪು ಮತ್ತು ಐತೀರ್ಪಿನ ವಿರುದ್ಧ ನಿರ್ದೇಶಿಸಲಾಗಿದೆ.ಎರಡನೇ ಎದುರುದಾರ-ಬೈಕ್ ಮಾಲೀಕನ ಪರೋಕ್ಷ ಸಮ್ಮತಿಯೊಂದಿಗೆ ಮೊದಲನೇ ಎದುರುದಾರ-ಕ್ಲೇಮುದಾರನು ಬೈಕ್ ಸವಾರನ ತಪ್ಪು ಸೂಚನೆಯನ್ನು ಪ್ರಶ್ನಿಸಿ ವಿಮಾ ಕಂಪನಿಯು ಸಂಕೀರ್ಣ ಪ್ರಥಮ ಅಪೀಲುಸಂಖ್ಯೆ: 7279/2016 ನ್ನು ಸಲ್ಲಿಸಿರುತ್ತದೆ.ಆದರೆ ಕ್ಲೇಮುದಾರನು ಪರಿಹಾರ ಹೆಚ್ಚಳವನ್ನು ಕೋರಿ ಸಂಕೀರ್ಣ ಪ್ರಥಮ ಅಪೀಲುಸಂಖ್ಯೆ: 7110/2016 ನ್ನು ಸಲ್ಲಿಸಿದ್ದಾನೆ.

2. ಅನುಕೂಲಕ್ಕಾಗಿ, ಪಕ್ಷಕಾರರನ್ನು ನ್ಯಾಯಾಧಿಕರಣದ ಮುಂದೆ ಅವರು ಹೊಂದಿರುವ ಶ್ರೇಣಿಯ ಪ್ರಕಾರ ಉಲ್ಲೇಖಿಸಲಾಗಿದೆ.

3. ಮೇಲಿನ ಅಪೀಲುಗಳ ಸಲ್ಲಿಕೆಗೆ ಕಾರಣವಾದ ಸಂಗತಿಗಳು ಕೆಳಗಿನಂತಿವೆ:

ಕೇಮುದಾರನು, ವಾರ್ಷಿಕ ಶೇಕಡ 12 ರ ಬಡ್ಡಿ ಸಹಿತ 51 ಲಕ್ಷ ರೂ.ಗಳ ಪರಿಹಾರವನ್ನು ಕ್ಲೇಮು ಮಾಡಿ ಕ್ಲೇಮು ಅರ್ಜಿಯನ್ನು ಸಲ್ಲಿಸಿದ್ದಾನೆ.ಕ್ಲೇಮುದಾರನು ಕ್ಲೇಮು ಅರ್ಜಿಯಲ್ಲಿ ವಿಶೇಷವಾಗಿ ವಾದಿಸಿರುವುದೇನೆಂದರೆ,ದಿನಾಂಕ: 24.09.2008 ರಂದು ಸುಮಾರು ರಾತ್ರಿ 10.15 ಗಂಟೆಯಲ್ಲಿ, ಆತನು ರಸ್ತೆ ಬದಿಯಲ್ಲಿ ನಡೆದುಕೊಂಡು ಬರುತ್ತಿದ್ದನು ಮತ್ತು ಆತನು ಉಡುಪಿ ತಾಲೂಕಿನ ಭಜನಕಟ್ಟೆ-ಬೊಮ್ಮರಬೆಟ್ಟು ತಲುಪಿದಾಗ, ಕೆಎ -20/ವಿ -1137 ನೋಂದಣಿ ಸಂಖ್ಯೆಯನ್ನು ಹೊಂದಿರುವ ಮೋಟಾರು ಸೈಕಲ್ ಹಿಂದಿನ ಭಾಗದಿಂದ ರಸ್ತೆಯ ಕೊನೆ ಬದಿಗೆ ರಭಸವಾಗಿ ಮತ್ತು ನಿರ್ಲಕ್ಷ್ಯದ ರೀತಿಯಲ್ಲಿ ಬಂದು, ಸಿಮೆಂಟ್ ಚರಂಡಿಗೆ ಡಿಕ್ಕಿ ಹೊಡೆಯಿತು ಮತ್ತು ಆ ತರುವಾಯ ತನಗೆ ಡಿಕ್ಕಿ ಹೊಡೆಯಿತು, ತತ್ಪರಿಣಾಮವಾಗಿ ಸದರಿ ಕ್ಲೇಮುದಾರನು ಕೆಳಗೆ ಬಿದ್ದು, ಆತನಿಗೆ ಗಂಭೀರ ಗಾಯಗಳಾದವು.ಕ್ಲೇಮುದಾರನನ್ನು ಕೂಡಲೇ ಹಿರಿಯಡ್ಕ ಕಾಮತ್ ನರ್ಸಿಂಗ್ ಹೋಮ್ಗೆ ಸ್ಥಳಾಂತರಿಸಿ, ಪ್ರಥಮ ಚಿಕಿತ್ಸೆ ನೀಡಿದ ನಂತರ ಆತನನ್ನು ಮಣಿಪಾಲದ ಕೆ.ಎಮ್.ಸಿ. ಹಾಸ್ಪಿಟಲ್ಗೆ ಸ್ಥಳಾಂತರಿಸಲಾಗಿತ್ತು ಮತ್ತು ಅಲ್ಲಿ ಆತನನ್ನು ಒಳರೋಗಿಯನ್ನಾಗಿ ಸೇರಿಸಲಾಗಿತ್ತು. ಅಪಘಾತದಲ್ಲಿ ಉಂಟಾದ ಗಂಭೀರ ಗಾಯಗಳ ಕಾರಣದಿಂದ ತಾನು ಚಿಕಿತ್ಸೆಗೆ ಒಳಗಾಗಿದ್ದು, 4 ಲಕ್ಷ ರೂ.ಗಳ 104 ಡಿವಿಜನಲ್

ವೈದ್ಯಕೀಯ ವೆಚ್ಚ ಭರಿಸಿರುವುದಾಗಿ ಕ್ಲೇಮುದಾರನು ಕ್ಲೇಮು ಅರ್ಜಿಯಲ್ಲಿ ನಿರ್ದಿಷ್ಟವಾಗಿ ವಾದಿಸಿದ್ದಾನೆ.ಇದಲ್ಲದೆ ಕ್ಲೇಮುದಾರನು, ತಾನು ವೃತ್ತಿ ತರಬೇತಿ ಪಡೆದಿರುವುದಾಗಿ ಹಾಗೂ ಯಾಂತ್ರಿಕ ನಿರ್ವಹಣೆಯಲ್ಲಿ ಕೋರ್ಸನ್ನು ಪೂರ್ಣಗೊಳಿಸಿರುವುದಾಗಿ ಹಾಗೂ ತಾನು ಕೈಗಾರಿಕಾ ತಂತ್ರಜ್ಞನಾಗಿದ್ದು, ಅದರಲ್ಲಿ ತರಬೇತಿ ಪಡೆದಿದ್ದು, ಮಾಸಿಕ 12,000/- ರೂ.ಗಳ ವೇತನವನ್ನು ಪಡೆಯುತ್ತಿದ್ದುದಾಗಿ ಮತ್ತು ಮೇಲೆ ಹೇಳಿದ ರಸ್ತೆ ಅಪಘಾತದಲ್ಲಿ ಉಂಟಾದ ಅಸಮರ್ಥತೆಯಿಂದಾಗಿ, ವಾಸ್ತವವಾಗಿ ತಾನು ನಿಷ್ಕ್ರಿಯತೆಯಿಂದ ಜೀವನವನ್ನು ನಡೆಸುತ್ತಿರುವುದಾಗಿ ವಾದಿಸಿದ್ದಾನೆ.ಇದಲ್ಲದೆ ಕ್ಲೇಮುದಾರನು, ತಾನು ಏಕೈಕ ದುಡಿಯುವ ವ್ಯಕ್ತಿಯಾಗಿದ್ದು, ಆತನ ತಂದೆಗೆ ಯಾವುದೇ ಕೆಲಸವಿಲ್ಲ ಮತ್ತು ಆತನ ಇಡೀ ಕುಟುಂಬವು ಆತನ ಗಳಿಕೆಯ ಮೇಲೆ ಆಧಾರಿತವಾಗಿದೆ ಎಂದು ವಾದಿಸಿದ್ದಾನೆ.ಈ ಕಾರಣಗಳ ಆಧಾರದ ಮೇಲೆ, ಆತನು ಕ್ಲೇಮು ಅರ್ಜಿಯನ್ನು ಸಲ್ಲಿಸಿದ್ದಾನೆ. ನೋಟೀಸನ್ನು ಸ್ವೀಕರಿಸಿದ ನಂತರ, ಮೊದಲನೇ ಎದುರುದಾರ-ಮಾಲೀಕನು ವಕೀಲರ ಮೂಲಕ ಹಾಜರಾಗಿ, ಕ್ಲೇಮುದಾರನು ಆರೋಪಿತ ಅಪಘಾತಕ್ಕೆ ಸಂಬಂಧಿಸಿದ ವಾಸ್ತವಿಕ ಸಂಗತಿಗಳನ್ನು ಅಡಗಿಸಿದ್ದಾನೆಂದು ವಾದಿಸಿ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದಾನೆ.ಆತನು ನಿರ್ದಿಷ್ಟವಾಗಿ ಹೇಳಿರುವುದೇನೆಂದರೆ, ಆರೋಪಿತ ಅಪಘಾತದ ದಿನದಂದು, ಬೈಕ್ ಸವಾರನು ಎಚ್ಚರಿಕೆಯಿಂದ ಮುಂದುವರಿಯುತ್ತಿದ್ದನು ಮತ್ತು ಆತನು ಭಜನಕಟ್ಟೆ-ಬೊಮ್ಮರಬೆಟ್ಟು ಎಂದು ಕರೆಯಲಾಗುವ ಸ್ಥಳವನ್ನು ತಲುಪಿದಾಗ, ಅರ್ಜಿದಾರನು ಹಠಾತ್ತನೆ ರಸ್ತೆಯನ್ನು ದಾಟಿ, ವಾಹನಕ್ಕೆ ಡಿಕ್ಕಿ ಹೊಡೆದನು ಮತ್ತು ಆತನಿಗೆ ಗಂಭೀರ ಗಾಯಗಳುಂಟಾದವು.ಈ ಪ್ರತಿವಾದಗಳ ಆಧಾರದ ಮೇಲೆ, ಕೈಮುದಾರನ ಕಡೆಯಿಂದಾದ ಹೊಣೆಗಾರಿಕೆಯ ನಿರ್ಲಕ್ಷ್ಯತೆಯ ತಪ್ಪಿತಸ್ಥನೆಂದು, ಹಾಗಾಗಿ ಅವನು ಯಾವುದೇ ಪರಿಹಾರಕ್ಕೆ ಅರ್ಹನಲ್ಲವೆಂದು ಮೊದಲನೇ ಎದುರುದಾರನು ಕ್ಲೇಮು ಮಾಡಿದ್ದಾನೆ.

2 ನೇ ಪ್ರತಿವಾದಿ-ವಿಮಾ ಕಂಪನಿಯು ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಕೇಮು ಅರ್ಜಿಯಲ್ಲಿ ಮಾಡಿರುವ ಎಲ್ಲಾ ವಾದಗಳನ್ನು ದೃಢವಾಗಿ ಅಲ್ಲಗಳೆದಿದೆ. 2ನೇ ಪ್ರತಿವಾದಿ-ವಿಮಾ ಕಂಪನಿಯು ಲಿಖಿತ ಹೇಳಿಕೆಯ 5 ನೇ ಕಂಡಿಕೆಯಲ್ಲಿ, ವಿಶೇಷವಾಗಿ ಕ್ಲೇಮು ಅರ್ಜಿಯಲ್ಲಿ ಕ್ಲೇಮುದಾರರು ನಿರೂಪಿಸಿದಂಥದೇ ಆವೃತ್ತಿಯನ್ನು ವಿವಾದಗೊಳಿಸಿದ್ದಾರೆ.ಕೇಮುದಾರನು ಆರೋಪಿತ ಅಪಘಾತದ ದಿನಾಂಕದಂದು ಮೋಟಾರು ಬೈಕ್‌ಅನ್ನು ಚಲಾಯಿಸುತ್ತಿದ್ದು, ಆತನು ದುಡುಕಿನಿಂದ ಮತ್ತು ನಿರ್ಲಕ್ಷದಿಂದ ಬೈಕ್ ಸವಾರಿ ಮಾಡಿದ್ದ ಕಾರಣದಿಂದ ನಿಯಂತ್ರಣ ಕಳೆದುಕೊಂಡು ಆತನಿಗೆ ಗಂಭೀರ ಗಾಯಗಳುಂಟಾಗಿದ್ದವು ಎಂಬುದು ವಿಮಾ ಕಂಪನಿಯ ನಿರ್ದಿಷ್ಟ ವಾದವಾಗಿದೆ.ಇದಲ್ಲದೆ, ಮೊದಲನೇ ಎದುರುದಾರನು ಸ್ವತಃ ಅಪಕೃತ್ಯಕಾರನಾಗಿರುವುದರಿಂದ, ಆತನು ಪರಿಹಾರ ಕ್ಲೇಮು ಮಾಡಲು ಹಕ್ಕುಳ್ಳವನಾಗಿಲ್ಲವೆಂದು ಎರಡನೇ ಪ್ರತಿವಾದಿ-ವಿಮಾ ಕಂಪನಿಯು ವಾದಿಸಿದೆ ಹಾಗೂ ಲಿಖಿತ ಹೇಳಿಕೆಯ 5 ನೇ ಕಂಡಿಕೆಯಲ್ಲಿ ಅದು, ಪರಿಹಾರ ಸಂದಾಯ ಮಾಡುವ ಹೊಣೆಗಾರಿಕೆಯನ್ನು ವಿಮಾ ಕಂಪನಿಯ ಮೇಲೆ ಹೊರಿಸುವ ಉದ್ದೇಶದೊಂದಿಗೆ ಬೈಕ್ ಮಾಲೀಕನು ಕ್ಲೇಮುದಾರನೊಂದಿಗೆ ಶಾಮೀಲಾಗಿದ್ದಾನೆಂದು ಮತ್ತು ಕ್ಲೇಮು ಅರ್ಜಿಯನ್ನು ಎರಡು ವರ್ಷಗಳ ನಂತರ ಸಲ್ಲಿಸಲಾಗಿದೆ ಎಂದು ನಿರ್ದಿಷ್ಟವಾಗಿ ವಾದಿಸಿದೆ.ಲಿಖಿತ ಹೇಳಿಕೆಯ 9 ನೇ ಕಂಡಿಕೆಯಲ್ಲಿ, ಅಪಘಾತದ ದಿನದಂದು ಕ್ಲೇಮುದಾರನು ಬೈಕ್‌ಅನ್ನು ಚಲಾಯಿಸುವ ವಾಹನ ಚಾಲನಾ ಪರಿವಾನಗಿಯನ್ನು ಹೊಂದಿರಲಿಲ್ಲವೆಂದು ಸಹ ವಾದಿಸಲಾಗಿದೆ.ಮೊದಲನೇ ಎದುರುದಾರನ ವೃತ್ತಿ, ವೇತನ ಮತ್ತು ಆತನಿಗೆ

ಉಂಟಾದ ಗಾಯಗಳ ಗಂಭೀರತೆಗೆ ಸಂಬಂಧಿಸಿದ ಇತರ ವಾದಗಳನ್ನು ಸಹ ವಿಮಾ ಕಂಪನಿಯು ತೀವ್ರವಾಗಿ ವಿರೋಧಿಸಿದೆ.

ಕೇಮುದಾರನು ತನ್ನ ತಾಯಿಯನ್ನು ಪಿ.ಡಬ್ಲ್ಯು .1 ಎಂಬುದಾಗಿ ಮತ್ತು ಸ್ವತಃ ತನ್ನನ್ನು ಪಿ.ಡಬ್ಲ್ಯು .2 ಎಂಬುದಾಗಿ ವಿಚಾರಣೆಗೆ ಒಳಪಡಿಸಿದ್ದಾನೆ.ಮೊದಲನೇ ಎದುರದಾರನು ಸಹ ಪಿ.ಡಬ್ಲ್ಯು .4 ಎಂಬ ಒಬ್ಬ ಪ್ರತ್ಯಕ್ಷ ಸಾಕ್ಷಿದಾರನ್ನು ವಿಚಾರಣೆಗೆ ಒಳಪಡಿಸಿದ್ದಾನೆ, ಪಿ.ಡಬ್ಲ್ಯು.ಆಗಿ ವೈದ್ಯರನ್ನು ಹಾಗೂ ಪಿ.ಡಬ್ಲ್ಯು .5 ಆಗಿ ತನಿಖಾಧಿಕಾರಿಯನ್ನು ವಿಚಾರಣೆಗೆ ಒಳಪಡಿಸಲಾಗಿದೆ.ಪ್ರತ್ಯಕ್ಷ ಸಾಕ್ಷ್ಯವನ್ನು ಸಮರ್ಥಿಸಲು, ಕ್ಲೇಮುದಾರನು ನಿಶಾನೆ ಪಿ .1 ರಿಂದ ಪಿ .22 ರವರೆಗೆ ದಾಖಲೆಗಳನ್ನು ಗುರುತಿಸಿದ್ದಾನೆ.

ಎರಡನೇ ಎದುರುದಾರ-ವಿಮಾ ಕಂಪನಿಯು ಆರ್.ಡಬ್ಲ್ಯು.1 ರಿಂದ 3 ರವರೆಗಿನ ಮೂವರು ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿದ್ದು, ಖಂಡನಾ ಸಾಕ್ಷ್ಯದ ಸಮರ್ಥನೆಗಾಗಿ ನಿಶಾನೆ ಆರ್ .1 ರಿಂದ 9 ರವರೆಗಿನ ದಸ್ತಾವೇಜೀಯ ಸಾಕ್ಷ್ಯವನ್ನು ಮತ್ತು ಮುದ್ದೆ ಮಾಲು 1-ಸಿ.ಡಿ.ಯನ್ನು ಹಾಜರುಪಡಿಸಿದೆ.

ವಾದಗಳ ಆಧಾರದ ಮೇಲೆ, ನ್ಯಾಯಾಧಿಕರಣವು ಈ ಮುಂದಿನಂತೆ ವಿವಾದಗಳನ್ನು ರೂಪಿಸಿದೆ:

"1. ಅರ್ಜಿದಾರನು ರಸ್ತೆ ಬದಿಯಲ್ಲಿ ನಡೆದುಕೊಂಡು ಬರುತ್ತಿದ್ದಾಗ, ಉಡುಪಿ ತಾಲೂಕಿನ ಭಜನಕಟ್ಟೆ, ಬೊಮ್ಮರಬೆಟ್ಟು ಗ್ರಾಮದಲ್ಲಿ ಮೋಟರ್ ಬೈಕ್ಸಂಖ್ಯೆ: ಕೆಎ .20/ವಿ -1137 ನ್ನು ಅದರ ಸವಾರನು ದುಡುಕಿನಿಂದ ಮತ್ತು ನಿರ್ಲಕ್ಷತನದಿಂದ ಚಲಾಯಿಸಿದ ಕಾರಣದಿಂದಾಗಿ ಆತನಿಗೆ ಗಾಯಗಳುಂಟಾದವು ಎಂಬುದನ್ನು ಅರ್ಜಿದಾರನು ಸಾಬೀತುಪಡಿಸಿರುವನೇ?

2. ನೋಂದಣಿಸಂಖ್ಯೆ: ಕೆಎ .20/ವಿ -1137 ನ್ನು ಹೊಂದಿರುವ ತನ್ನ ಮೋಟರ್ ಸೈಕಲ್ಲನ್ನು ಅರ್ಜಿದಾರನು ಸ್ವತಃ ದುಡುಕಿನಿಂದ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸುತ್ತಿದ್ದನು ಮತ್ತು ಆತನ ತಪ್ಪಿನಿಂದ, ಅಪಘಾತವುಂಟಾಯಿತೆಂದು 2 ನೇ ಎದುರುದಾರ-ವಿಮಾ ಕಂಪನಿಯು ಸಾಬೀತುಪಡಿಸಿರುವುದೇ?

3. ಅರ್ಜಿದಾರನು, ಅಪಘಾತ ಸಂಭವಿಸಿದ ಸಮಯದಲ್ಲಿ ಯಾವುದೇ ಪರಿಣಾಮಕಾರಿ ಚಾಲನಾ ಪರವಾನಗಿಯನ್ನು ಹೊಂದಿರಲಿಲ್ಲ ಎಂಬುದನ್ನು 2 ನೇ ಎದುರುದಾರ-ವಿಮಾ ಕ ಂ ಪನಿಯು ಸಾಬೀತುಪಡಿಸಿರುವುದೇ?

4. ಅರ್ಜಿದಾರನು ಪರಿಹಾರಕ್ಕೆ ಹಕ್ಕುಳ್ಳವನಾಗಿರುವನೇ?ಹಾಗಿದ್ದರೆ, ಎಷ್ಟು ಪರಿಹಾರಕ್ಕೆ ಹಕ್ಕುಳ್ಳವನಾಗಿರುವನು?

5. ಆದೇಶವೇನು?

ದಾಖಲೆಯಲ್ಲಿರುವ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯದ ಗುಣಾರ್ಹತೆಯ ಆಧಾರದ ಮೇಲೆ ನ್ಯಾಯಾಧಿಕರಣವು,ದಿನಾಂಕ: 26.03.2013 ರ ತೀರ್ಪಿನ ಮೂಲಕ ಕ್ಲೇಮು ಅರ್ಜಿಯನ್ನು ವಜಾಗೊಳಿಸಿದ್ದು, ಅದರ ವಿರುದ್ಧ ಕೇಮುದಾರರು ಸಂಕೀರ್ಣ ಪ್ರಥಮ ಅಪೀಲುಸಂಖ್ಯೆ: 6683/2013 ರಲ್ಲಿ ಈ ನ್ಯಾಯಾಲಯದ ಮುಂದೆ ಅಪೀಲನ್ನು ಸಲ್ಲಿಸಿದ್ದು, ಹೊಸದಾಗಿ ವಿಲೆ ಮಾಡಲು ನ್ಯಾಯಾಧಿಕರಣಕ್ಕೆ ವಿಷಯವನ್ನು ಹಿಂತಿರುಗಿಸಿದಿನಾಂಕ: 20.11.2015 ರ ತೀರ್ಪಿನ ಮೂಲಕ ಅದಕ್ಕೆ ಅನುಮತಿ ನೀಡಲಾಗಿತ್ತು.

ಹಿಂದಿರುಗಿಸಿದ ನಂತರ, ನ್ಯಾಯಾಧಿಕರಣವು ಹೊಸದಾಗಿ ಪರಿಗಣಿಸಲು ವಿಷಯವನ್ನು ಕೈಗೆತ್ತಿಕೊಂಡಿತು.ಹಿಂತಿರುಗಿಸಿದ ನಂತರ, ಕ್ಲೇಮುದಾರನಾಗಲಿ ಅಥವಾ ವಿಮಾ ಕಂಪನಿಯಾಗಲಿ ಅವರ ವಾದಗಳ ಸಮರ್ಥನೆಗಾಗಿ ಯಾವುದೇ ಹೆಚ್ಚಿನ ಸಾಕ್ಷ್ಯವನ್ನಾಗಲಿ ಅಥವಾ ಯಾವುದೇ ಹೆಚ್ಚುವರಿ ದಸ್ತಾವೇಜೀಯ ಸಾಕ್ಷ್ಯವನ್ನಾಗಲಿ ಹಾಜರುಪಡಿಸಿಲ್ಲ ಎಂಬುದು ಸಹ ದಾಖಲೆಗಳಿಂದ ರುಜುವಾತುಪಟ್ಟಿದೆ.

ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ವಿಶ್ಲೇಷಿಸಿದ ನಂತರ ನ್ಯಾಯಾಧಿಕರಣವು 1 ನೇ ವಿವಾದಾಂಶಕ್ಕೆ ಸಕಾರಾತ್ಮಕವಾಗಿ ಉತ್ತರಿಸಿದೆ ಹಾಗೂ 2 ನೇ ಮತ್ತು 3 ನೇ ವಿವಾದಾಂಶಕ್ಕೆ ಸಹ ಸಕಾರಾತ್ಮಕವಾಗಿ ಉತ್ತರಿಸಿದ್ದು, ನ್ಯಾಯಾಧೀಕರಣವು ವಿಮಾ ಕಂಪನಿಯ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸುವ ಮೂಲಕ, ಕ್ಲೇಮು ಅರ್ಜಿಯ ದಿನಾಂಕದಿಂದ ಅದು ವಸೂಲಾಗುವವರೆಗೆ ವಾರ್ಷಿಕ ಶೇಕಡ 6 ರ ದರದಲ್ಲಿ ಬಡ್ಡಿ ಸಹಿತವಾಗಿ 22,77,400/- ರೂ.ಗಳ ಪರಿಹಾರದ ಐತೀರ್ಪು ನೀಡಿ ಕ್ರಮ ಜರುಗಿಸಿದೆ.ಇದರಿಂದ ಬಾಧಿತರಾಗಿ ಕ್ಲೇಮುದಾರ ಮತ್ತು ವಿಮಾ ಕಂಪನಿ ಈರ್ವರೂ ಈ ಅಪೀಲುಗಳನ್ನು ಸಲ್ಲಿಸಿದ್ದಾರೆ.

4. ವಿಮಾ ಕಂಪನಿಯ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು, ಆರೋಪಿತ ಅಪಘಾತವುದಿನಾಂಕ: 24.09.2008 ರಂದು ಸಂಭವಿಸಿದ್ದು, ಕ್ಲೇಮು ಅರ್ಜಿಯನ್ನು ಅಪಘಾತ ಸಂಭವಿಸಿದ ಎರಡು ವರ್ಷಗಳ ನಂತರ ಸಲ್ಲಿಸಲಾಗಿದ್ದು, ಇದು ಕ್ಲೇಮು ಅರ್ಜಿಯಲ್ಲಿ ಆರೋಪಿಸಿದ ಅಪಘಾತ ಸಂಭವಿಸಿರುವುದಕ್ಕೆ ಸಂಬಂಧಿಸಿದಂತೆ ಅನುಮಾನವನ್ನು ಹುಟ್ಟು ಹಾಕುತ್ತದೆ ಎಂದು ತೀವ್ರವಾಗಿ ವಾದಿಸಿದ್ದಾರೆ.ಕ್ಲೇಮುದಾರನು ಸ್ವತಃ ಬೈಕನ್ನು ಚಲಾಯಿಸುತ್ತಿದ್ದು, ಆತನ ನಿರ್ಲಕ್ಷ್ಯದಿಂದಾಗಿ ಬೈಕ್ ಜಾರಿ ಗಾಯಗಳುಂಟಾಗಿವೆ ಎಂದು ಅವರು ವಾದಿಸಿದ್ದಾರೆ ಮತ್ತು ವಿವಾದಗೊಳಿಸಿದ್ದಾರೆ.ಇದಲ್ಲದೆ ಅವರು, ಮೊಕದ್ದಮೆಯ ಸಂಗತಿಗಳು ಮತ್ತು ಸಂದರ್ಭಗಳನ್ನು ಗಮನದಲ್ಲಿರಿಸಿಕೊಂಡು ಸರಿಯಾಗಿಯೇ ತಿರಸ್ಕರಿಸಿರುವ ಪೊಲೀಸ್ ದಾಖಲೆಗಳನ್ನು ಆಧರಿಸುವಲ್ಲಿ ನ್ಯಾಯಾಧಿಕರಣವು ತಪ್ಪೆಸಗಿದೆ ಎಂದು ವಾದಿಸಿದ್ದಾರೆ.ಇದಲ್ಲದೆ, ಇದರಲ್ಲಿ ಎರಡನೇ ಎದುರುದಾರನಾಗಿರುವ ಬೈಕಿನ ಮಾಲೀಕನು, ನಿಶಾನೆ ಆರ್ .2 ರಂತೆ ಹಾಜರುಪಡಿಸಿರುವ ಬೈಕಿಗೆ ಉಂಟಾದ ಹಾನಿಗಳಿಗಾಗಿದಿನಾಂಕ: 24.10.2008 ರಿಂದ ತನ್ನ ಮೋಟಾರು ಕ್ಲೇಮನ್ನು ಸಲ್ಲಿಸಿದ್ದು, ಅದರಲ್ಲಿ ಆತನು, ಕ್ಲೇಮುದಾರನು ಅಪಘಾತವಾದ ಆರೋಪಿತ ದಿನಾಂಕದಂದು ಬೈಕನ್ನು ಚಲಾಯಿಸುತ್ತಿದ್ದನೆಂದು ಹೇಳಿದ್ದಾನೆ ಎಂದು ವಾದಿಸಿದ್ದಾರೆ.ಇದಲ್ಲದೆ ಮಾನ್ಯ ನ್ಯಾಯವಾದಿಗಳು, ಸ್ಮಾರ್ಟ್ ವ್ಯಾಲ್ಯೂ ಪ್ರೊಡಕ್ಟ್ ಅಂಡ್ ಸರ್ವೀಸ್ ಲಿಮಿಟೆಡ್ ಇವರು ಅಪಘಾತಕ್ಕೀಡಾದ ಬೈಕಿನ ಮಾಲೀಕರಾಗಿದ್ದು, ಅವರಲ್ಲಿ ಕ್ಲೈಮುದಾರನು ಕೆಲಸ ನಿರ್ವಹಿಸುತ್ತಿದ್ದನು ಮತ್ತು ಸದರಿ ವಾದವನ್ನು ರುಜುವಾತುಪಡಿಸಲು, ವಿಮಾ ಕಂಪನಿ ಪರ ಮಾನ್ಯ ನ್ಯಾಯವಾದಿಗಳು, ನಿಶಾನೆ ಪಿ .56 (ಎ) ಯಿಂದ (ಸಿ) ವರೆಗಿನ ದಾಖಲೆಗಳಲ್ಲಿ ಹಾಜರುಪಡಿಸಿರುವ ಫೋಟೋಗ್ರಾಫ್ಗಳ ಕಡೆಗೆ ಈ ನ್ಯಾಯಾಲಯದ ಗಮನ ಸೆಳೆದಿದ್ದಾರೆ ಹಾಗೂ ಈ ಫೋಟೋಗ್ರಾಫ್ಗಳನ್ನಾಧರಿಸಿ ಅವರು, ಬೈಕ್ನ ಮೇಲೆ ಕೆತ್ತಿರುವ ಸ್ಮಾರ್ಟ್ ವ್ಯಾಲ್ಯೂ ಕಂಪನಿಯ ಹೆಸರು ಫೋಟೋಗ್ರಾಫ್ಗಳಲ್ಲಿ ಕಾಣಿಸುತ್ತಿದೆ ಎಂದು ಈ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದ್ದಾರೆ.ಇದಲ್ಲದೆ ಮಾನ್ಯ ನ್ಯಾಯವಾದಿಗಳು, ಮೊದಲನೇ ಎದುರುದಾರನು ಗೊತ್ತು ಮಾಡಿಕೊಂಡಿರುವ ನ್ಯಾಯವಾದಿಗಳಿಗೆ ಸಂಬಂಧಿಸಿದ ಅತ್ಯಂತ ಗೊಂದಲದಾಯಕ ಸಂಗತಿಯನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ.ವಿಮಾ ಕಂಪನಿಯು ತನ್ನ ಉಪಸ್ಥಿತಿಯನ್ನು ಕಾಪಾಡಿಕೊಳ್ಳುವ ಎಲ್ಲಾ ಕಾವ್ಯಸಾಧ್ಯ ಪ್ರಯತ್ನಗಳನ್ನು ಮಾಡಿದೆ.ಅವರ ಮನವಿಯಂತೆ ಸಮನುಗಳನ್ನು ನೀಡಲಾಗಿತ್ತು ಮತ್ತು ಸಮನುಗಳನ್ನು ಜಾರಿ ಮಾಡಿದರೂ ಸಹ, ಮೊದಲನೇ ಎದುರುದಾರನು ನ್ಯಾಯಾಲಯದ ಮುಂದೆ ಹಾಜರಾಗಿಲ್ಲ.ಇದಲ್ಲದೆ ಅವರು, ವಾರ ಂ ಟನ್ನು ಜಾರಿ ಮಾಡಿದರೂ ಸಹ,

ಅವುಗಳನ್ನು ಕಾರಗತಗೊಳಿಸಿರುವುದಿಲ್ಲ ಮತ್ತು ಮೊದಲನೇ ಎದುರುದಾರನು ನ್ಯಾಯಾಧಿಕರಣದ ಮುಂದೆ ಇತ್ಯರ್ಥದಲ್ಲಿರುವ ವ್ಯವಹರಣೆಗಳಿಂದ ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾನೆ ಎಂದು ನಿವೇದಿಸಿಕೊಂಡಿದ್ದಾರೆ.ಈ ಪ್ರತಿವಾದಗಳ ಆಧಾರದ ಮೇಲೆ, ಅಪೀಲುದಾರ-ವಿಮಾ ಕಂಪನಿಯ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು, ಇದು ಮೋಸದ ಅತೀ ಮುಖ್ಯ ಸಂಗತಿಯಾಗಿದ್ದು, ಬೈಕ್ನ ಮಾಲೀಕ ಮತ್ತು ತನಿಖಾಧಿಕಾರಿಯೊಂದಿಗೆ ಶಾಮೀಲಾಗಿ ಕ್ಲೇಮುದಾರನು ಪರಿಹಾರ ಕೋರಲು ಸುಳ್ಳು ಮೊಕದ್ದಮೆಯ ಸಂಚು ಮಾಡಿದ್ದಾನೆ ಎಂದು ನಿವೇದಿಸಿಕೊಂಡಿದ್ದಾರೆ.

ತಮ್ಮ ವಾದಗಳನ್ನು ಸಮರ್ಥಿಸಲು ಅವರು, ವೀರಪ್ಪ ಮತ್ತು ಇನ್ನೊಬ್ಬರು ವಿರುದ್ಧ ಸಿದ್ದಪ್ಪ ಮತ್ತು ಇನ್ನೊಬ್ಬರು, ಐಎಲ್ಆರ್ 2009 ಕೆಎಆರ್ 3562 ಬ್ರಾಂಚ್ ಮ್ಯಾನೇಜರ್, ಓರಿಯಂಟಲ್ ಇನ್ಸುರನ್ಸ್ ಕಂಪನಿ ಅಮಿಟೆಡ್ -ವಿರುದ್ಧ-ಕೆಂಪಮ್ಮ ಮತ್ತು ಇತರರರು, 2014 ಕೆಎಆರ್ 3336 ನ್ಯೂ ಇಂಡಿಯ ಅಚ್ಯುರನ್ಸ್ ಕಂಪನಿ ಅಮಿಟೆಡ್ -ವಿರುದ್ಧ-ಜಗದೀಶ್ ರೆಡ್ಡಿ ಮತ್ತು ಇನ್ನೊಬ್ಬರು, ಎಮ್ಎಫ್ಎ 962/2007 ಶ್ರೀಮತಿ ಆರತಿ -ವಿರುದ್ಧ-ಎಸ್.ಎಮ್.ಉಮೇಶ್ ಮತ್ತು ಬಜಾಜ್ ಎಮ್ಎಫ್ಸಂಖ್ಯೆ: 7025/2011 ಅಲಯನ್ಸ್ ಜನರಲ್ ಇನ್ಸುರನ್ಸ್ ಕಂಪನಿ ಅಮಿಟೆಡ್ -ವಿರುದ್ಧ-ಬಿ.ಸಿ.ಕುಮಾರ್ ಐಎಲ್ಆರ್ 2009 ಕೆಎಆರ್ 2921 ಈ ಮೊಕದ್ದಮೆಗಳಲ್ಲಿ ಈ ನ್ಯಾಯಾಲಯವು ನೀಡಿದ ವರದಿಯಾಗದ ತೀರ್ಪುಗಳನ್ನು ಅವಲಂಬಿಸಿದ್ದಾರೆ.

5. ಇದಕ್ಕೆ ತದ್ವಿರುದ್ಧವಾಗಿ, ಕ್ಲೇಮುದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಗಳು, ನಿಶಾನೆ ಪಿ .1-ಪ್ರಥಮ ಮಾಹಿತಿ ವರದಿ, ಪಿ .1 ( ಎ) -ದೂರು, ಪಿ .2-ಸ್ಥಳ ಮಹಜರು, ಪಿ .55-ಆರೋಪ ಪಟ್ಟಿ ಇವುಗಳ ಪ್ರಕಾರ ಕ್ಲೇಮುದಾರರು ಹಾಜರುಪಡಿಸಿದ ದಸ್ತಾವೇಜುಗಳು, ಅಪಘಾತಕ್ಕೀಡಾದ ಬೈಕ್ ಸವಾರನ ದುಡುಕಿನ ಮತ್ತು ನಿರ್ಲಕ್ಷ್ಯತನವನ್ನು ಸ್ಪಷ್ಟವಾಗಿ ಸಾಬೀತುಪಡಿಸುತ್ತವೆ ಎಂದು ತೀವ್ರವಾಗಿ ವಾದಿಸಿದ್ದಾರೆ ಮತ್ತು ಸಮರ್ಥಿಸಿಕೊಂಡಿದ್ದಾರೆ.ಕೇಮುದಾರನು ರಸ್ತೆಯಲ್ಲಿ ಪಾದಚಾರಿಯಾಗಿ ನಡೆಯುತ್ತಿದ್ದನು ಹಾಗೂ ಬೈಕ್ ಸವಾರನ ದುಡುಕಿನ ಮತ್ತು ನಿರ್ಲಕ್ಷ್ಯತನದಿಂದ ಅಪಘಾತವುಂಟಾಗಿದ್ದು, ಆ ಮೂಲಕ ಕ್ಲೇಮುದಾರನಿಗೆ ಗಂಭೀರ ಗಾಯಗಳುಂಟಾಗಿವೆ ಎಂಬುದು ದಾಖಲೆಯಲ್ಲಿನ ನಿರ್ಣಾಯಕ ಸಾಕ್ಷ್ಯದಿಂದ ಸಾಬೀತಾಗುತ್ತದೆ ಎಂದು ಅವರು ವಾದಿಸಿದ್ದಾರೆ.

ವಿಳಂಬಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಗಂಭೀರ ಗಾಯಗಳ ಕಾರಣದಿಂದ ಕ್ಲೇಮುದಾರನು ಛಿದ್ರ ಮನಸ್ಥಿತಿಯಿಂದ (ಜೋಫೋನಿಯ) ಬಳಲುತ್ತಿದ್ದು, ಕಾರಕ್ಷೇತ್ರವುಳ್ಳ ಪೊಲೀಸ್ ಠಾಣೆಯಲ್ಲಿ ಆತನು ದೂರನ್ನು ದಾಖಲಿಸುವ ಸ್ಥಿತಿಯಲ್ಲಿರಲಿಲ್ಲವೆಂದು ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.ಇದಲ್ಲದೆ, ಕೇಮುದಾರನು ಪೊಲೀಸ್ ದಾಖಲೆಗಳನ್ನು ಹಾಜರುಪಡಿಸುವ ಮೂಲಕ ಅಪಘಾತವನ್ನು ಸಾಬೀತುಪಡಿಸುವಲ್ಲಿ ಯಶಸ್ವಿಯಾಗಿರುವನೆಂದು, ಹಾಗಾಗಿ ಅಪಘಾತ ಸಂಭವಿಸಿದ ರೀತಿಗೆ ಸಂಬಂಧಿಸಿದಂತೆ ವಿಮಾ ಕಂಪನಿಯು ಎತ್ತಿದ ಕಾರಣಗಳನ್ನು ಪರಿಶೀಲಿಸಲಾಗದು ಎಂದು ಮಾನ್ಯ ನ್ಯಾಯವಾದಿಗಳು ವಾದಿಸಿದ್ದಾರೆ.ಈ ಪ್ರತಿವಾದಗಳ ಮೇರೆಗೆ, ನ್ಯಾಯಾಧಿಕರಣವು ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯಗಳನ್ನು ಸರಿಯಾಗಿಯೇ ವಿಶ್ಲೇಷಿಸಿದೆ ಹಾಗೂ 1 ನೇ ವಿವಾದಾಂಶಕ್ಕೆ ಸಕಾರಾತ್ಮಕವಾಗಿ ಸರಿಯಾಗಿಯೇ ಉತ್ತರಿಸಿದೆ ಎಂದು ಕ್ಲೇಮುದಾರನ ಪರ ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿರುವರು. ನಿರ್ಧರಿಸಿದ ಪರಿಹಾರದ ಪ್ರಮಾಣವು, ಕ್ಲೇಮುದಾರನು ಹಾಜರುಪಡಿಸಿದ ಕಾನೂನು ಸಾಕ್ಷ್ಯವನ್ನಾಧರಿಸಿದ್ದು, ವಿಷಯಕ್ಕೆ ಸಂಬಂಧಿಸಿದ

ಈ ಅಭಿಪ್ರಾಯದ ಹಿನ್ನೆಲೆಯಲ್ಲಿ, ತೀರ್ಪು ಮತ್ತು ಐತೀರ್ಪಿನಲ್ಲಿ ಈ ನ್ಯಾಯಾಲಯವು ಹಸ್ತಕ್ಷೇಪ ಮಾಡುವುದು ಸಮರ್ಥನೀಯವಲ್ಲ.

6. ವಿಮಾ ಕಂಪನಿ ಮತ್ತು ಕ್ಲೇಮುದಾರನ ಪರ ಮಾನ್ಯ ನ್ಯಾಯವಾದಿಗಳ ಅಹವಾಲುಗಳನ್ನು ಆಲಿಸಲಾಗಿದೆ ಮತ್ತು ಪಕ್ಷಕಾರರ ವಾದಗಳನ್ನು 0 ಅವಲೋಕಿಸಲಾಗಿದೆ.ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ನಾವು ಸೂಕ್ಷ್ಮವಾಗಿ ಪರಿಶೀಲಿಸಿದ್ದೇವೆ ಮತ್ತು ಮರು-ವಿಶ್ಲೇಷಿಸಿದ್ದೇವೆ.

7. ನಮ್ಮ ಪರಿಗಣನೆಗೆ ಉದ್ಭವಿಸುವ ಅಂಶಗಳು ಈ ಮುಂದಿನಂತಿವೆ:

" ( 1) 1 ನೇ ವಿವಾದಾಂಶಕ್ಕೆ ಸಕಾರಾತ್ಮಕವಾಗಿ ಉತ್ತರಿಸುವ ಮೂಲಕ ನ್ಯಾಯಾಧಿಕರಣವು, ಬೈಕ್ ಸವಾರನ ದುಡುಕಿನ ಮತ್ತು ನಿರ್ಲಕ್ಷ್ಯತನದ ಚಾಲನೆಯ ಕಾರಣದಿಂದಾಗಿ ಕ್ಲೇಮುದಾರನು ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದಾನೆ ಎಂದು ನಿರ್ಣಯಿಸಿರುವುದು ನ್ಯಾಯಯುತ ವಾಗಿದೆಯೇ?

( 2) ಕೈಮುದಾರನು ಸ್ವತಃ ಬೈಕ್ ಸವಾರಿ ಮಾಡುತ್ತಿದ್ದನು ಮತ್ತು ಸ್ವತಃ ಕ್ಲೇಮುದಾರನ ದುಡುಕಿನ ಮತ್ತು ನಿರ್ಲಕ್ಷ್ಯತನದ ಕಾರಣದಿಂದ ಅಪಘಾತ ಸಂಭವಿಸಿದೆ ಎಂದು ಸಾಬೀತುಪಡಿಸಲು ಅಪೀಲುದಾರ ವಿಮಾ ಕಂಪನಿಯು ವಿಫಲವಾಗಿದೆ ಎಂಬ ನ್ಯಾಯಾಧಿಕರಣದ ನಿರ್ಣಯವು ವ್ಯತಿರಿಕ್ತವಾಗಿದ್ದು, ಸ್ಪಷ್ಟವಾಗಿಯೇ ತಪ್ಪಾದುದಾಗಿದೆಯೇ ಮತ್ತು ದಾಖಲೆಯಲ್ಲಿರುವ ನಿರ್ಣಾಯಕ ಎಕ ಸಾಕ ವಿರುದ್ಧವಾದುದಾಗಿದೆಯೇ? "

112 8. 1 ನೇ ಮತ್ತು 2 ನೇ ವಿವಾದಾಂಶಗಳಿಗೆ ಉತ್ತರ:

ಕ್ಲೇಮುದಾರನುದಿನಾಂಕ: 24.9.2008 ರಂದು ಭಜನಕಟ್ಟೆ ಕಡೆಗೆ ರಸ್ತೆ ಬದಿ ನಡೆದುಕೊಂಡು ಹೋಗುತ್ತಿದ್ದಾಗ, ಆ ಸಮಯದಲ್ಲಿ ಮೊದಲನೇ ಪ್ರತಿವಾದಿಯ ಮಾಲಿಕತ್ವ ಹೊಂದಿದ್ದ ಆರೋಪಿತ ಬೈಕ್ ಸವಾರನು ದುಡುಕಿನಿಂದ ಮತ್ತು ನಿರ್ಲಕ್ಷ್ಯದ ರೀತಿಯಲ್ಲಿ ಬಂದು, ಆತನಿಗೆ ಡಿಕ್ಕಿ ಹೊಡೆದನು ಮತ್ತು ಅದರಿಂದಾಗಿ ಆತನಿಗೆ ಗಂಭೀರ ಗಾಯಗಳುಂಟಾದವು ಎಂದು ವಾದಿಸುವ ಮೂಲಕ ಕ್ಲೇಮುದಾರನು ಕೇಮು ಅರ್ಜಿಯನ್ನು ಸಲ್ಲಿಸಿದ್ದಾನೆ.ಅಪಘಾತವುದಿನಾಂಕ: 24.09.2008 ರಂದು ಸಂಭವಿಸಿತಾದರೂ, ಕ್ಲೇಮುದಾರನು ಕ್ಲೇಮು ಅರ್ಜಿಯನ್ನುದಿನಾಂಕ: 12.03.2010 ರಂದು ಸಲ್ಲಿಸಿದ್ದನು.ಕ್ಲೇಮು ಅರ್ಜಿಯನ್ನು ಸಲ್ಲಿಸುವಲ್ಲಿ ಮಿತಿಮೀರಿದ ವಿಳಂಬವಾಗಿದ್ದು, ಈ ವಿಳಂಬವು ಪ್ರಸ್ತುತ ಮೊಕದ್ದಮೆಯಲ್ಲಿ ಸುಂಸಗತತೆಯನ್ನು ಹೊಂದಿದ್ದು, ಅದನ್ನು ತರುವಾಯದಲ್ಲಿ ಚರ್ಚಿಸಲಾಗುವುದು.

ವಿಮಾ ಕಂಪನಿಯು ಅಪಘಾತ ಸಂಭವಿಸಿರುವ ರೀತಿಯನ್ನು ತೀವ್ರವಾಗಿ ವಿವಾದಗೊಳಿಸಿದೆ.ಲಿಖಿತ ಹೇಳಿಕೆಯ 5 ನೇ ಕಂಡಿಕೆಯಲ್ಲಿ ಅದು ಕ್ಲೇಮುದಾರನು ವಾಸ್ತವವಾಗಿ ಬೈಕ್ ಸವಾರಿ ಮಾಡುತ್ತಿದ್ದು, ತನ್ನದೇ ನಿರ್ಲಕ್ಷ್ಯತೆಯಿಂದಾಗಿ ಆತನಿಗೆ ಗಾಯಗಳುಂಟಾಗಿದ್ದವೆಂದು ನಿರ್ದಿಷ್ಟ ವಾದವನ್ನು ಮಾಡಿದೆ. ಪ್ರತಿವಾದವನ್ನು ಸಮರ್ಥಿಸಲು, ಎರಡನೇ ಎದುರುದಾರ-ವಿಮಾ ಕಂಪನಿಯು ಸಾಕ್ಷ್ಯ ಎಲಾ ಮಂಡಿಸಿದ್ದು, ಖಂಡನಾ/ಪ್ರತಿವಾದದ ದಸ್ತಾವೇಜೀಯ ಸಾಕ್ಷ್ಯವನ್ನು ಸಹ ಹಾಜರುಪಡಿಸಿದೆ.ಅಪಘಾತದ ನಂತರ, ಆರೋಪಿತ ಬೈಕಿನ ಮಾಲೀಕನಾಗಿರುವ ಮೊದಲನೇ ಎದುರುದಾರನು, ಬೈಕಿಗೆ ಉಂಟಾದ ಹಾನಿಯ ಕಾರಣದಿಂದ ನಿಶಾನೆ ಆರ್ .2 ಪ್ರಕಾರ ಕ್ಲೇಮು ನಮೂನೆಯನ್ನು ಸಲ್ಲಿಸಿದ್ದು, ಅದರಲ್ಲಿ ಕೆಲವು ವಿವರಗಳನ್ನು ಒದಗಿಸಲಾಗಿದೆ.ಈ ಕ್ಲೇಮು ನಮೂನೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದ ನಂತರ, ಮೊದಲನೇ ಎದುರುದಾರನು ಆರೋಪಿತ

ಬೈಕಿನ ಮಾಲೀಕನಾಗಿದ್ದು, ವಿಮೆಯನ್ನು ಸಹ ಹೊಂದಿದ್ದಾನೆ ಮತ್ತು ಅದನ್ನು ವಿಮೆಗೆ ಒಳಗಾದವನ ವಿವರಗಳಿಗೆ ಸಂಬಂಧಿಸಿದ ಅಂಕಣದಲ್ಲಿ ವ್ಯಕ್ತಪಡಿಸಲಾಗಿದೆ ಎಂಬುದು ನಮಗೆ ತಿಳಿದುಬರುತ್ತದೆ.ಕ್ಲೇಮು ನಮೂನೆಯ 3 ನೇ ಖಂಡವು ಮಹತ್ವಪೂರ್ಣ ವಿವರಗಳನ್ನು ಬಹಿರಂಗಪಡಿಸುತ್ತದೆ ಮತ್ತು ಅಪಘಾತ ಸಂಭವಿಸಿದ ರೀತಿಗೆ ಸಂಬಂಧಿಸಿದ ಇಡೀ ವಿವಾದಕ್ಕೆ ನಿರ್ಣಾಯಕವಾಗಿದೆ.ನಿಶಾನೆ ಆರ್ .2 ರಲ್ಲಿರುವ ಕ್ಲೇಮು ನಮೂನೆಯ 3 ನೇ ಖಂಡವು, ಆರೋಪಿತ ಅಪಘಾತದ ದಿನಾಂಕದಂದು ಬೈಕನ್ನು ಯಾರು ಚಲಾಯಿಸುತ್ತಿದ್ದರು ಎಂಬುದನ್ನು ಬಹಿರಂಗಪಡಿಸುತ್ತದೆ.ಮೊದಲನೇ ಎದುರುದಾರ ಬೈಕಿನ ಮಾಲೀಕನು, ಬೈಕನ್ನು ಕ್ಲೇಮುದಾರನು ಚಲಾಯಿಸುತ್ತಿದ್ದನು ಎಂದು ಸುಸ್ಪಷ್ಟವಾದ ಪದಗಳಲ್ಲಿ ಹೇಳಿದ್ದಾನೆ.ಇದಲ್ಲದೆ, ಸದರಿ ಕ್ಲೇಮು ನಮೂನೆಯ 3 ನೇ ಪುಟದಲ್ಲಿನ 5 ನೇ ಖಂಡದಲ್ಲಿ, ಮೊದಲನೇ ಎದುರುದಾರ-ಮಾಲೀಕನು, ಅಪಘಾತ ಸಂಭವಿಸಿದ ರೀತಿಯ ಮೇಲೆ ಸಾಕಷ್ಟು ಬೆಳಕು ಚೆಲ್ಲುವ ಅಪಘಾತದ ಮತ್ತಷ್ಟು ವಿವರಗಳನ್ನು ಒದಗಿಸಿದ್ದಾನೆ.ಸದರಿ ವಿವರಗಳು ಅಷ್ಟೇ ಮಹತ್ವಪೂರ್ಣದ್ದಾಗಿದ್ದು, ಮೊದಲನೇ ಎದುರುದಾರನು ಎರಡು ವರ್ಷಗಳು ಗತಿಸಿದ ನಂತರ ಕ್ಲೇಮು ಅರ್ಜಿಯನ್ನು ಏಕೆ ಸಲ್ಲಿಸಿದ್ದಾನೆ ಎಂಬುದಕ್ಕೆ ಸ್ವತಃ ವಿವರಣೆ ನೀಡುತ್ತವೆ.ಅಪಘಾತದ ವಿವರಗಳಿಗೆ ಸಂಬಂಧಿಸಿದ 5 ನೇ ಖಂಡದಲ್ಲಿ, ಮಾಲೀಕನು ತನ್ನ ಗೆಳೆಯನು ಬೈಕನ್ನು ಚಲಾಯಿಸುತ್ತಿದ್ದನು ಎಂದು ಹೇಳಿದ್ದಾನೆ.ದಿನಾಂಕ: 24.9.2008 ರಂದು ರಾತ್ರಿ ಸುಮಾರು 9.00 ಗಂಟೆಗೆ, ಬೈಕಿನಲ್ಲಿ ಉಡುಪಿ ಶಿರ್ವಾ ಕಡೆ ಹೋಗುತ್ತಿದ್ದಾಗ, ರಸ್ತೆಯ ಮಧ್ಯದಲ್ಲಿ ಹಠಾತ್ತಾಗಿ ಒಂದು ನಾಯಿ ಅಡ್ಡ ಬಂದು, ತನ್ನ ಗೆಳೆಯ ಎಂದರೆ ಕ್ಲೇಮುದಾರನು, ಅಪಘಾತ ತಪ್ಪಿಸಲು ಬೈಕಿನ ದಿಕ್ಕನ್ನು ಬದಲಾಯಿಸಲು ಪ್ರಯತ್ನಿಸಿದನು ಮತ್ತು ಹಾಗೆ ಮಾಡುವಾಗ, ಬೈಕ್ ಜಾರಿ ಬಿದ್ದಿತು ಮತ್ತು ಹಾಗಾಗಿ ಬೈಕಿಗೆ ಹಾನಿಯುಂಟಾಯಿತು ಎಂದು ಸಹ 2 ನೇ ಎದುರುದಾರನು ಹೇಳಿದ್ದಾನೆ.

9. ಅವಿವಾದಿತ ಸಮಯದಲ್ಲಿ ಮೊದಲನೇ ಎದುರುದಾರ-ಮಾಲೀಕನು ಸಲ್ಲಿಸಿದ ಕೇಮು ನಮೂನೆಯ 3 ನೇ ಮತ್ತು 5 ನೇ ಕಂಡಿಕೆಗಳಲ್ಲಿನ ಈ ಎರಡು ಮಧ್ವತಪೂರ್ಣ ವಿವರಗಳು ಇಡೀ ವಿವಾದವನ್ನು ಕುರಿತು ನಿರ್ಣಯಿಸುತ್ತದೆ ಮತ್ತು ಅಪಘಾತವು ಹೇಗೆ ಸಂಭವಿಸಿತು ಎಂಬ ಬಗ್ಗೆ ಯಾವುದೇ ಸಂಶಯವನ್ನು ಉಳಿಸುವುದಿಲ್ಲ. ಇದಲ್ಲದೆ, ನಿಶಾನೆ-ಆರ್ .2 ರ ಪ್ರಕಾರ, ಕ್ಲೇಮು ನಮೂನೆಯಲ್ಲಿ ಒದಗಿಸಿದ ವಿವರಗಳಿಂದ, ಮಾಲೀಕನು ಕ್ಲೇಮುದಾರನ ಪರಿಚಿತನಾಗಿದ್ದು, ಅಂಥ ಪರಿಚಯದ ಕಾರಣದಿಂದ ಆತನು ಕ್ಲೇಮುದಾರನಿಗೆ ಬೈಕನ್ನು ನೀಡಿದ್ದನು ಎಂಬುದು ಕಂಡುಬರುತ್ತದೆ.ಅಲ್ಲದೆ ಆತನು, ತನ್ನ ಗೆಳೆಯನು, ಎಂದರೆ ಕ್ಲೇಮುದಾರನು ರಸ್ತೆ ಮಧ್ಯದಲ್ಲಿ ಅಡ್ಡ ಬಂದ ನಾಯಿಯನ್ನು ತಪ್ಪಿಸಲು ಪ್ರಯತ್ನಿಸಿದಾಗ, ಅಪಘಾತ ಸಂಭವಿಸಿತೆಂದು ಸ್ಪಷ್ಟವಾದ ಪದಗಳಲ್ಲಿ ಹೇಳಿದ್ದಾನೆ.ವಿಮಾ ಕಂಪನಿಯು ದಾಖಲೆಯಲ್ಲಿ ಸೇರಿಸಿರುವ ಈ ನಿರ್ಣಾಯಕ ಸಾಕ್ಷ್ಯವು, ಅಪಘಾತ ಸಂಭವಿಸಿದ ರೀತಿಗೆ ಸಂಬಂಧಿಸಿದಂತೆ ಸಂಶಯವನ್ನು ಹುಟ್ಟು ಹಾಕುವದಷ್ಟೇ ಅಲ್ಲದೆ, ಅದು ಕ್ಲೇಮುದಾರನ ವಾದವನ್ನೇ ಸುಳ್ಳಾಗಿಸುತ್ತದೆ.ಈ ಮುಖ್ಯ ಸಂಗತಿಯು, ನಿಶಾನೆ ಆರ್ .7 ರ ಪ್ರಕಾರ ಮಾಲೀಕನು ಕ್ಲೇಮು ನಮೂನೆಯನ್ನು ಹಿಂಪಡೆದ ಹಿನ್ನೆಲೆಯಲ್ಲಿ ಮತ್ತಷ್ಟು ದೃಢಪಡಿಸುತ್ತದೆ.ನಿಶಾನೆ ಆರ್ .3 ರ ಪ್ರಕಾರ, ವಿಮಾದಾರನ ಸಮೀಕ್ಷಕ ಮತ್ತು ನಷ್ಟ ಅಧಿಕಾರಿಯು, ಬೈಕಿಗೆ ಉಂಟಾದ ಹಾನಿಯನ್ನು ನಿರ್ಧರಿಸಿ,ದಿನಾಂಕ: 26.10.2008 ರಂದು ವರದಿಯನ್ನು ಸಲ್ಲಿಸಿದ್ದಾನೆ.ಆದಾಗ್ಯೂ, ನಿಶಾನೆ-ಆರ್ .7 ರ ಪ್ರಕಾರ,ದಿನಾಂಕ: 28.10.2008 ರಂದು, ಮೊದಲನೇ ಎದುರುದಾರ ಆರೋಪಿತ ಬೈಕಿನ ಮಾಲೀಕನು, ಬೈಕಿಗೆ ಉಂಟಾದ ಹಾನಿಯನ್ನು ಮೌಲ್ಯ ನಿರ್ಧಾರಕನು ಸೂಕ್ತವಾಗಿ ನಿರ್ಧರಿಸಿಲ್ಲ ಮತ್ತು 2,700/- ರೂ.ಗಳ ಹಾನಿ ನಿರ್ಧರಣೆಯು ಅತ್ಯಂತ ಕಡಿಮೆಯಾಗಿದೆ ಎಂಬ ಕಾರಣದ ಮೇಲೆ ಕ್ಲೇಮು ನಮೂನೆಯನ್ನು ತಾನು

ಹಿಂಪಡೆಯುವುದಾಗಿ ಹೇಳಿ ಅರ್ಜಿಯನ್ನು ಸಲ್ಲಿಸಿದ್ದಾನೆ.ಕ್ಲೇಮುದಾರನು ತನ್ನ ವಾದವನ್ನು ರುಜುವಾತುಪಡಿಸಲು, ಪಿ.ಡಬ್ಲ್ಯು .4 ರ ಸಾಕ್ಷ್ಯವನ್ನು ಮತ್ತು ನಿಶಾನೆ-ಪಿ .1 ರಿಂದ ಪಿ .3 ರವರೆಗಿನ ಪೊಲೀಸ್ ದಾಖಲೆಗಳನ್ನು, ಪಿ -4 ಎಂದರೆ ಪ್ರಥಮ ಮಾಹಿತಿ ವರದಿಯನ್ನು, ದೂರು, ಸ್ಥಳ ಮಹಜರಿನ ಪ್ರತಿ, ಪೊಲೀಸ್ ನೋಟೀಸಿನ ಪ್ರತಿ ಹಾಗೂ ಆರೋಪ ಪಟ್ಟಿಯಾಗಿರುವ ನಿಶಾನೆ-ಪಿ .55 ನ್ನು ಅವಲಂಬಿಸಿದ್ದಾನೆ.ನಾವು, ಪಿ.ಡಬ್ಲ್ಯು 4 ರ ಸಾಕ್ಷ್ಯವನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದು, ಲ ಈ ಸಾಕ್ಷಿದಾರನನ್ನು ಉದ್ದೇಶಪೂರ್ವಕವಾಗಿ ಸೇರಿಸಿದ್ದು, ಆತನ ಪ್ರತ್ಯಕ್ಷ ಸಾಕ್ಷ್ಯಕ್ಕೆ ಯಾವುದೇ ವಿಶ್ವಾಸಾರ್ಹತೆಯನ್ನು ಅನ್ವಯಿಸಲಾಗುವುದಿಲ್ಲವೆಂದು ಅಭಿಪ್ರಾಯಪಡಲು ನಮಗೆ ಯಾವುದೇ ಹಿಂಜರಿಕೆ ಇಲ್ಲ.

10. ವಿವಾದಸಂಖ್ಯೆ: 1 ಮತ್ತು 2 ನ್ನು ಕುರಿತು ನಿರ್ಣಯಕ್ಕೆ ಬರುವ ಕುರಿತು ಅವಲಂಬಿಸಲಾಗಿರುವ ಮತ್ತೊಂದು ಮುಖ್ಯ ಸಂಗತಿಯನ್ನು ಕುರಿತು ನ್ಯಾಯಾಧಿಕರಣವು ಗಮನ ನೀಡಿರುವುದಿಲ್ಲ.ವಿಮಾ ಕಂಪನಿಯು, ಈ ಕ್ಲೇಮು ಅರ್ಜಿಯು ಸಂಚಿನಿಂದ ಕೂಡಿದ್ದು, ಅದನ್ನು ಮಾಲೀಕ-ಮೊದಲನೇ ಎದುರುದಾರನೊಂದಿಗೆ ಹಾಗೂ ಪೊಲೀಸ್ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸಲ್ಲಿಸಲಾಗಿದೆ.ವಿಚಾರಣೆ ಇತ್ಯರ್ಥದಲ್ಲಿರುವಾಗ, ಮೊದಲನೇ ಎದುರುದಾರ-ಮಾಲೀಕನು ಲಿಖಿತ ಹೇಳಿಕೆಯನ್ನು ಸಲ್ಲಿಸಿದನಾದರೂ, ವ್ಯವಹರಣೆಗಳನ್ನು ಎದುರಿಸುವುದನ್ನು ಆಯ್ಕೆ ಮಾಡಿಕೊಂಡಿರುವುದಿಲ್ಲ ಎಂಬ ವಾದವನ್ನು ಸಾಧಿಸಿದೆ.ವಿಮಾ ಕಂಪನಿಯ ಮನವಿಯ ಮೇರೆಗೆ ನ್ಯಾಯಾಧಿಕರಣವು ಸಮನುಗಳನ್ನು ನೀಡಿದೆ.ಸಮನುಗಳನ್ನು ನೀಡಿದರೂ ಸಹ, ಮೊದಲನೇ ಎದುರುದಾರ-ಮಾಲೀಕನು ನ್ಯಾಯಾಲಯದ ಮುಂದೆ ಹಾಜರಾಗಿರುವುದಿಲ್ಲ.ಮೊದಲನೇ ಎದುರುದಾರ-ಮಾಲೀಕನ ಹಾಜರಾತಿಯನ್ನು ಖಚಿತಪಡಿಸಲು ನ್ಯಾಯಾಧಿಕರಣವು ಬಂಧನದ ವಾರಂಟನ್ನು ನೀಡಿತು.ಮೊದಲನೇ ಎದುರುದಾರ-ಆರೋಪಿತ ಬೈಕಿನ ಮಾಲೀಕನು ಬಂಧನದ ವಾರಂಟಿನಿಂದ ತಪ್ಪಿಸಿಕೊಂಡಿದ್ದಾನೆ ಮತ್ತು ನ್ಯಾಯಾಧಿಕರಣದ ಮುಂದೆ ಹಾಜರಾಗಿರುವುದಿಲ್ಲ.ಈ ಮುಖ್ಯ ಸಂಗತಿಯು, ಕೇಮುದಾರನು ಮಾಲೀಕನೊಂದಿಗೆ ಶಾಮೀಲಾಗಿ, ಪರಿಹಾರ ಸಂದಾಯ ಮಾಡಲು ವಿಮಾ ಕಂಪನಿಯ ಮೇಲೆ ಹೊಣೆಗಾರಿಕೆಯನ್ನು ಹೊರಿಸುವ ಆಶಯದೊಂದಿಗೆ ಕ್ಲೇಮು ಅರ್ಜಿಯನ್ನು ಸಲ್ಲಿಸಿದ್ದಾನೆ ಎಂಬುದನ್ನು ಸೂಚಿಸುತ್ತದೆ.

11. ಪ್ರಸ್ತುತ ಮೊಕದ್ದಮೆಯಲ್ಲಿ ನ್ಯಾಯಾಧಿಕರಣವು ಪೊಲೀಸ್ ದಾಖಲೆಗಳನ್ನು ಒಪ್ಪುವಲ್ಲಿ ತಪ್ಪೆಸಗಿದೆ.ನಿಶಾನೆ-ಆರ್ .1 ಮತ್ತು ಆರ್ .2 ಗಳನ್ನು ಪುಷ್ಟೀಕರಿಸಲು, ಮೊದಲನೇ ಎದುರುದಾರ-ಮಾಲೀಕನನ್ನು ಪರೀಕ್ಷಿಸಲು ವಿಫಲವಾದುದಕ್ಕಾಗಿ ವಿಮಾ ಕಂಪನಿಯ ವಿರುದ್ಧ ಪ್ರತಿಕೂಲ ತೀರ್ಮಾನಕ್ಕೆ ಬರುವಲ್ಲಿ ಸಹ ನ್ಯಾಯಾಧಿಕರಣವು ವಿಫಲವಾಗಿದೆ.ಆರ್.ಡಬ್ಲ್ಯು.ಇವರ ಸಾಕ್ಷ್ಯವು ಪಿ.ಡಬ್ಲ್ಯು .2, 4 ಮತ್ತು 5 ಇವರ ಸಾಕ್ಷ್ಯಕ್ಕೆ ವಿರುದ್ಧವಾಗಿದೆ ಮತ್ತು ನಿಶಾನೆ-ಪಿ .1, ಪಿ 1 ಎ ಮತ್ತು ಪಿ .2 ಪ್ರಕಾರ ದಸ್ತಾವೇಜೀಯ ಸಾಕ್ಷ್ಯಕ್ಕೆ ಸಹ ವಿರುದ್ಧವಾಗಿದೆ ಎಂದು ನಿರ್ಣಯಿಸುವಲ್ಲಿ ಸಹ ನ್ಯಾಯಾಧಿಕರಣವು ತಪ್ಪೆಸಗಿದೆ.ನ್ಯಾಯಾಧಿಕರಣಗಳು, ಮೋಟಾರು ಅಪಘಾತ ಮೊಕದ್ದಮೆಗಳಲ್ಲಿ ಅಪರಾಧದ ನೋಂದಣಿಗೆ ಸಂಬಂಧಿಸಿದ ಪೊಲೀಸ್ ದಾಖಲೆಗಳನ್ನು ವಿಶ್ಲೇಷಿಸುವಾಗ, ಸಮಗ್ರ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಅಗತ್ಯ ಎಂಬುದು ಕಾನೂನಿನ ಸರ್ವೇಸಾಮಾನ್ಯ ನಿಲುವಾಗಿದೆ.ಆದಾಗ್ಯೂ, ವಿಮಾ ಕಂಪನಿಯು ಮೋಸದ ಕ್ಲೇಮು ಎಂಬ ಖಚಿತ ಸಂದರ್ಭದೊಂದಿಗೆ ಬಂದಾಗ, ಅಂಥ ಸಂದರ್ಭಗಳಲ್ಲಿ, ನ್ಯಾಯಾಧಿಕರಣವು ಪೊಲೀಸ್ ದಾಖಲೆಗಳನ್ನು ಒಪ್ಪುವಲ್ಲಿ ಎಚ್ಚರಿಕೆಯಿಂದಿರಬೇಕಾದ ಅಗತ್ಯವಿದೆ.ಸಾಮಾನ್ಯವಾಗಿ, ವಿಮಾ ಕಂಪನಿ ಕಡೆಯಿಂದ ಗಂಭೀರ

ವಿವಾದಗಳು ಇಲ್ಲದಿರುವ ಎಲ್ಲಾ ಸಂದರ್ಭಗಳಲ್ಲಿ, ನ್ಯಾಯಾಧಿಕರಣವು ಪ್ರಥಮ ಮಾಹಿತಿ ವರದಿ, ಸ್ಥಳ ನಕಾಶೆ ಮತ್ತು ಆರೋಪ ಪಟ್ಟಿಯನ್ನು ಅವಲ ಂ ಬಿಸುತ್ತದೆ.

12. ಪ್ರಸ್ತುತ ಮೊಕದ್ದಮೆಯಲ್ಲಿ, ನ್ಯಾಯಾಧಿಕರಣವು, ಸಂಪೂರ್ಣವಾಗಿ ಒಂದು ಕಡೆಯ ದೃಷ್ಟಿಕೋನವನ್ನು ಅಳವಡಿಸಿಕೊಂಡಿದ್ದು, ಎರಡನೇ ಎದುರುದಾರ ವಿಮಾ ಕಂಪನಿಯು ಮಂಡಿಸಿದ ನಿರ್ಣಾಯಕ ಖಂಡನಾ ಸಾಕ್ಷ್ಯವನ್ನು ವಾಸ್ತವವಾಗಿ ಬಿಟ್ಟುಬಿಟ್ಟಿದೆ.ವಿಮಾ ಕಂಪನಿಯು ಮಂಡಿಸಿದ ನಿರ್ಣಾಯಕ ಸಾಕ್ಷ್ಯದ ಸೂಕ್ಷ್ಮ ಎಂ ಪರಿಶೀಲನೆಯಿಂದ ಮತ್ತು ಪ್ರಾ.ಸಾ .2, 4 ಮತ್ತು 5 ಇವರ ಸಾಕ್ಷ್ಯವನ್ನು ಪರಿಶೀಲಿಸಿದ ನಂತರ, ಎರಡನೇ ಎದುರುದಾರ-ವಿಮಾ ಕಂಪನಿಯು, ಮಾಲೀಕನ ಪರೋಕ್ಷ ಸಮ್ಮತಿಯೊಂದಿಗೆ ಕ್ಲೇಮುದಾರನು ಮಾಡಿದ ಮೋಸವನ್ನು ಸಾಬೀತುಪಡಿಸುವಲ್ಲಿ ಯಶಸ್ವಿಯಾಗಿದೆ.ಕ್ಲೇಮು ಅರ್ಜಿಯನ್ನು ಎರಡು ವರ್ಷಗಳ ನಂತರ ಸಲ್ಲಿಸಲಾಗಿದ್ದು, ಈ ಅತಿಯಾದ ವಿಳಂಬವನ್ನು ಸೂಕ್ತವಾಗಿ ವಿವರಿಸಿಯೇ ಇರುವುದಿಲ್ಲ.ಕೇಮು ಅರ್ಜಿಯನ್ನು ಸಲ್ಲಿಸುವಲ್ಲಿ ಆದ ವಿಳಂಬವು, ಕ್ಲೇಮು ಅರ್ಜಿಯನ್ನು ಯುಕ್ತ ಪರ್ಯಾಲೋಚನೆಯ ನಂತರವೇ ಸಲ್ಲಿಸಲಾಗಿದೆ ಎಂಬುದನ್ನು ಸೂಚಿಸುತ್ತದೆ.ಕ್ಲೇಮು ಅರ್ಜಿಯಲ್ಲಿ ಮಾಡಿದ ವಾದಗಳು ಸಹ ಪೊಲೀಸ್ ಅಧಿಕಾರಿಗಳ ನೆರವಿನೊಂದಿಗೆ ವಿರೂಪಗೊಳಿಸಿದ ಸಂಗತಿಗಳನ್ನಾಧರಿಸಿವೆ.ಅಪಘಾತವನ್ನು ನೋಡಿದ ಪ್ರಾ.ಸಾ .4 ನಂಬಿಕೆಗೆ ಅರ್ಹನಲ್ಲ ಮತ್ತು ವಿಶ್ವಾಸಪಾತ್ರನಲ್ಲ, ಕ್ಲೇಮು ಮಾಡಿರುವ ಆತನ ಪ್ರತ್ಯಕ್ಷ ಸಾಕ್ಷ್ಯವು ಸಂಪೂರ್ಣವಾಗಿ ಅಸಂಭವತೆಗಳಿಂದ ಕೂಡಿದೆ.ಪ್ರಾ.ಸಾ .4 ರ ಸಾಕ್ಷ್ಯವನ್ನು ಅವಲಂಬಿಸುವಲ್ಲಿ ನ್ಯಾಯಾಧಿಕರಣವು ಸಂಪೂರ್ಣವಾಗಿ ತಪ್ಪೆಸಗಿದೆ.ನಿಶಾನೆ-ಆರ್ .2 ರ ಪ್ರಕಾರ, ಕೇಮು ನಮೂನೆಯಲ್ಲಿ ಮತ್ತು ಪೊಲೀಸ್ ದಾಖಲೆಗಳಲ್ಲಿ ಅಪಘಾತದ ಸ್ಥಳವು ವ್ಯತ್ಯಾಸಗೊಂಡಿರುವುದರಿಂದ, ಅಲ್ಲಿ ಪ್ರಾ.ಸಾ .4 ರ ಇರುವಿಕೆಯು ಸಂಶಯಾತ್ಮಕವಾಗಿ ಕಂಡುಬರುತ್ತದೆ.ಆತನ ಹೇಳಿಕೆಯು ಸಹ ಸಂಶಯವನ್ನು ಹುಟ್ಟುಹಾಕುತ್ತದೆ.ಈ ಸಾಕ್ಷ್ಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಮತ್ತು ಅಪಘಾತವು ಉಂಟಾಗಿರುವ ರೀತಿಗೆ ಸಂಬಂಧಿಸಿದಂತೆ ಆತನ ನಿರೂಪಣೆಯನ್ನು ಪರಿಗಣನೆಗೆ ತೆಗೆದುಕೊಂಡರೆ, ಅಪಘಾತ ಉಂಟಾಗಿರುವ ರೀತಿಗೆ ಸಂಬಂಧಿಸಿದಂತೆ ಸುಳ್ಳು ಸಾಕ್ಷ್ಯ ಎಂ ನೀಡಲು ಆತನು ಮುಂದೆ ಬಂದಿರುವುದರಿಂದ, ಆತನ ಸಾಕ್ಷ್ಯವನ್ನು ಸಾರಾಸಗಟಾಗಿ ನಂಬಲಾಗದು.

13. ಈಗ, ತನಿಖಾಧಿಕಾರಿಯಾಗಿರುವ ಪ್ರಾ.ಸಾ .5 ರ ಸಾಕ್ಷ್ಯಕ್ಕೆ ಬರೋಣ. ನಾವು ಅವರ ಸಾಕ್ಷ್ಯವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದ್ದೇವೆ.ಪಾಟಿ ಸವಾಲಿನಲ್ಲಿ ಅವರು, ಸಹಾಯಕ ಸಬ್-ಇನ್ಸ್ಪೆಕ್ಟರ್ ಮಾಧವ ಎಸ್. ಎಂಬುವವರಿಂದ ತಾನು ತನಿಖೆಯನ್ನು ವಹಿಸಿಕೊಂಡಿದುದಾಗಿ ಹೇಳಿದ್ದಾರೆ.ಇದಲ್ಲದೆ ಅವರು, ಎಲ್ಲಾ ಹೇಳಿಕೆಗಳನ್ನು ಸಹಾಯಕ ಸಬ್-ಇನ್ಸ್ಪೆಕ್ಟರ್ ಅವರು ದಾಖಲಿಸಿದ್ದರೆಂದು ಹೇಳಿದ್ದಾರೆ.ಪ್ರಾ.ಸಾ. ಅವರು, ಮುಂಚಿನ ತನಿಖಾಧಿಕಾರಿಯು ಸಂಗ್ರಹಿಸಿದ ಹೇಳಿಕೆಗಳನ್ನು ಅವರು ಪರಿಶೀಲಿಸಿರುವುದಾಗಿ ಹೇಳಿದ್ದಾರೆ.ಈ ಸಾಕ್ಷಿದಾರರು, ಅಪರಾಧಸಂಖ್ಯೆ: 80/08 ರಲ್ಲಿನ ಆರೋಪಿ ಶಬೀರ್ ಅಹಮ್ಮದ್ ಅವರಿಗೆ ಯಾವುದೇ ಗಾಯಗಳುಂಟಾಗಿದ್ದವೇ ಅಥವಾ ಇಲ್ಲವೇ ಎಂಬುದನ್ನು ತಾನು ಪರಿಶೀಲಿಸಿಲ್ಲವೆಂದು ಹೇಳಿದ್ದಾರೆ.ಈ ಹೇಳಿಕೆಯು ಪ್ರಸ್ತುತ ಮೊಕದ್ದಮೆಗೆ ಸಂಬಂಧಿಸಿದುದಾಗಿದೆ.ಕ್ಲೇಮುದಾರ ಹಾಗೂ ಮೊದಲನೇ ಎದುರುದಾರ-ಮಾಲೀಕನು, ಬೈಕ್ ಸವಾರನೆಂಬುದಾಗಿ ತೋರಿಸಿರುವ ಈ ಶಬೀರ್ ಅಹಮ್ಮದ್ನನ್ನು ತೋರಿಸಿದ್ದಾರೆ.ಆದರೆ, ಪ್ರಾ.ಸಾ .5 ರವರು, ಮುಂಚಿನ ತನಿಖಾಧಿಕಾರಿಗೆ ಹೊಣೆಯನ್ನು ಅನುಕೂಲಕರವಾಗಿ ವರ್ಗಾಯಿಸಿದ್ದಾರೆ ಮತ್ತು ಶಬೀರ್ ಅಹಮ್ಮದ್ಗೆ ಯಾವುದೇ ಗಾಯಗಳಾಗಿದ್ದವೇ ಎಂಬುದನ್ನು ತಾನು ಪರಿಶೀಲಿಸಿಲ್ಲವೆಂದು ಹೇಳಿದ್ದಾರೆ.ಪ್ರಾ.ಸಾ.ರವರು, 25.09.2008 ರಂದು ಲಿಖಿತ ದೂರನ್ನು ಸಲ್ಲಿಸಿದ್ದ ಕ್ಲೇಮುದಾರನು ಬೈಕ್ ಸವಾರನ ಹೆಸರನ್ನು ಬಹಿರಂಗಪಡಿಸಿರಲಿಲ್ಲವೆಂದು ಸಹ ಹೇಳಿದ್ದಾರೆ.ಇದಲ್ಲದೆ ಪ್ರಾ.ಸಾ.ರವರು, ಪ್ರತ್ಯಕ್ಷ ಸಾಕ್ಷಿ ಎ

ಮೊಹಮ್ಮದ್ ಅನ್ಸರ್ ಎಂದರೆ ಪ್ರಾ.ಸಾ .4 ಎಂಬಾತನ ಹೇಳಿಕೆಯ ಆಧಾರದ ಮೇಲೆ ಶಫಿ ಅಹಮ್ಮದ್ ಎಂಬಾತನ ವಿರುದ್ಧ ಆರೋಪ ಪಟ್ಟಿಯನ್ನು ತಾನು ಸಲ್ಲಿಸಿದುದಾಗಿ ಹೇಳಿದ್ದಾರೆ.ತನಿಖೆಯನ್ನು ಉದ್ದೇಶಪೂರ್ವಕವಾಗಿ ದೋಷಪೂರ್ಣಗೊಳಿಸಿದ್ದಾರೆ ಎಂಬುದು ದಾಖಲೆಗಳಿಂದ ತಿಳಿದುಬರುತ್ತದೆ.ಆರೋಪ ಪಟ್ಟಿಯ ಸರಿತನವನ್ನು ನಾವು ಪರಿಶೀಲಿಸಿಲ್ಲವಾದಾಗ್ಯೂ, ಈ ನ್ಯಾಯಾಲಯವು, ರಸ್ತೆ ಅಪಘಾತದ ಪ್ರಕರಣಗಳ ತನಿಖೆ ಮಾಡುತ್ತಿರುವ ತನಿಖಾಧಿಕಾರಿಯ ನಡತೆಯನ್ನು ನ್ಯಾಯಿಕವಾಗಿ ಗಮನಿಸಬೇಕಾಗುತ್ತದೆ.ಸಲ್ಲಿಸಲಾದ ಆರೋಪ ಪಟ್ಟಿಯನ್ನು ಎಲ್ಲಾ ಮೊಕದ್ದಮೆಗಳಲ್ಲಿ ಪರಮ ಸತ್ಯವೆಂದು ಒಪ್ಪಿಕೊಳ್ಳಲಾಗುವುದಿಲ್ಲ.ಇತ್ತೀಚಿನ ವರ್ಷಗಳಲ್ಲಿ, ತನಿಖಾಧಿಕಾರಿಗಳು ಕ್ಲೇಮುದಾರ ಹಾಗೂ ಅಪಘಾತಕ್ಕೀಡಾದ ವಾಹನದ ಮಾಲೀಕನ ಪರೋಕ್ಷ ಸಹಮತಿಯೊಂದಿಗೆ, ಅವರ ಉದ್ದೇಶಕ್ಕೆ ಹೊಂದುವಂತೆ ಮತ್ತು ತದನುಸಾರವಾಗಿ ಪರಿಹಾರ ಕ್ಲೇಮು ಮಾಡಲು ಅವರಿಗೆ ಸಾಧ್ಯವಾಗುವಂತೆ ಸಂಗತಿಗಳನ್ನು ವಿರೂಪಗೊಳಿಸುತ್ತಿದ್ದಾರೆ.ಸ್ವಲ್ಪಮಟ್ಟಿನ ನಿಯಂತ್ರಣವು, ಆಗಾಗ್ಗೆ, ಪೊಲೀಸ್ ಅಧಿಕಾರಿಗಳ ಮಾನಸಿಕ ಸಮತೋಲನವನ್ನು ಕೆಡಿಸಿದಾಗ, ಅವರು ತಾವು ಸರ್ಕಾರಿ ನೌಕರರಾಗಿರದೆ ಸಾರ್ವಜನಿಕರ ಯಜಮಾನರೆಂದು ಭಾವಿಸಲು ಒಲವು ತೋರಿಸುತ್ತಾರೆ ಎಂಬುದು ಗೊತ್ತಿರುವಂಥದ್ದೇ.ತನಿಖಾಧಿಕಾರಿಗಳು, ತಮ್ಮ ಅಧಿಕಾರಗಳೊಂದಿಗೆ, ಆಗಾಗ್ಗೆ ತಮ್ಮ ಅಧಿಕಾರಗಳನ್ನು ಮೀರಿ ನಡೆದುಕೊಳ್ಳುತ್ತಾರೆ ಮತ್ತು ವಾಸ್ತವವಾಗಿ ವಿಮಾ ಕಂಪನಿಯ ಮೇಲೆ ಹೊಣೆ ಹೊರಿಸುವ ದುರುದ್ದೇಶದಿಂದ ವಾಹನಗಳು, ಸವಾರರು, ಚಾಲಕರನ್ನು ಮೋಸದಿಂದ ಸಿಕ್ಕಿಸಿಹಾಕಿಸುವಲ್ಲಿ ಕ್ಲೇಮುದಾರರಿಗೆ ನೆರವಾಗುತ್ತಾರೆ.ಸತ್ಯ ಸಂಗತಿಗಳೊಂದಿಗೆ ಪ್ರಾಸಿಕ್ಯೂಷನ್ ಮೊಕದ್ದಮೆಗೆ ಆಧಾರ ಒದಗಿಸುವುದಷ್ಟೇ ಅಲ್ಲದೆ, ನೈಜ ಮತ್ತು ಶುದ್ಧ ಸತ್ಯವನ್ನು ಹೊರತರುವುದು ಸಹ ತನಿಖಾಧಿಕಾರಿಗಳ ಆದ್ಯ ಕರ್ತವ್ಯವಾಗಿದೆ ಎಂಬುದನ್ನು ಅವರು ಮರೆತಿದ್ದಾರೆ.ಆದರೆ ದುರ್ದೈವವೆಂದರೆ, ಈ ದಿನಗಳಲ್ಲಿ, ಪೊಲೀಸ್ ವಿಚಾರಣೆಗಳಲ್ಲಿ ಮತ್ತು ತನಿಖೆಗಳಲ್ಲಿ ಈ ತತ್ವವವು ಅತ್ಯಂತ ಕಡಿಮೆ ಗೋಚರವಾಗುತ್ತಿದೆ.ಪ್ರಸ್ತುತ ಮೊಕದ್ದಮೆಯಲ್ಲಿ ಇದೇ ಆಗಿರುವುದು.ಈ ಪ್ರಕರಣವನ್ನು ತನಿಖೆ ಮಾಡಿರುವ ಇಬ್ಬರು ತನಿಖಾಧಿಕಾರಿಗಳಿದ್ದಾರೆ.ಪರಿಹಾರ ಕೋರಲು ಕ್ಲೇಮುದಾರನಿಗೆ ಸಾಧ್ಯವನ್ನಾಗಿಸಲು ಇದು ಉದ್ದೇಶಪೂರ್ವಕ ಪರಿಣಾಮಕಾರಿಯಲ್ಲದ ತನಿಖೆಯಾಗಿದೆ ಎಂದು ನಿರ್ಣಯಿಸಲು ನಾವು ಹಿಂಜರಿಯುವುದಿಲ್ಲ.ತೀರ್ಪುಗಳ ಸರಣಿಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ಮಾರ್ಗಸೂಚಿಗಳಿದ್ದು, ಅಂಥದರಲ್ಲಿ ನ್ಯಾಯಾಧಿಕರಣವು ಪೊಲೀಸ್ ದಾಖಲೆಗಳ ಸಮಗ್ರ ಅಭಿಪ್ರಾಯವನ್ನು ಗಮನಕ್ಕೆ ತೆಗೆದುಕೊಳ್ಳುವ ಅಗತ್ಯವಿದ್ದು, ಅದನ್ನು ಮೋಸದ ಸಂದರ್ಭಗಳಿಗೆ ಅನ್ವಯಿಸಲಾಗುವುದಿಲ್ಲ.ಪ್ರಸ್ತುತ ಮೊಕದ್ದಮೆಯಲ್ಲಿ, ಪೊಲೀಸ್ ದಾಖಲೆಗಳನ್ನವಲಂಬಿಸಿರುವುದನ್ನು ವಿಮಾ ಕಂಪನಿಯು ಮಂಡಿಸಿದ ನಿರ್ಣಾಯಕ ಖಂಡನಾ ಸಾಕ್ಷ್ಯದ ಹಿನ್ನೆಲೆಯಲ್ಲಿ ಸಾರಾಸಗಟಾಗಿ ತಳ್ಳಿಹಾಕಬೇಕಾಗುತ್ತದೆ.

14. 2 ನೇ ಎದುರುದಾರ-ವಿಮಾ ಕಂಪನಿಯು ಮಂಡಿಸಿದ ಖಂಡನಾ ಸಾಕ್ಷ್ಯವನ್ನು ತಿರಸ್ಕರಿಸಲು ನ್ಯಾಯಾಧಿಕರಣವು ಯಾವುದೇ ತರ್ಕಬದ್ಧ ಕಾರಣಗಳನ್ನು ನೀಡಿರುವುದಿಲ್ಲ.ಇದಕ್ಕೆ ತದ್ವಿರುದ್ಧವಾಗಿ, ಕ್ಲೈಮುದಾರನು ಮೋಸವೆಸಗಿದ್ದಾನೆ ಎಂದು ಸಾಬೀತುಪಡಿಸುವಲ್ಲಿ ವಿಮಾ ಕಂಪನಿಯು ಯಶಸ್ವಿಯಾಗಿದೆ.ವಿಮಾ ಕಂಪನಿಗೆ ನಿಶಾನೆ-ಆರ್ .2 ರ ಪ್ರಕಾರ ಸಲ್ಲಿಸಲಾದ ಕ್ಲೇಮು ನಮೂನೆಯಲ್ಲಿ ಮೊದಲನೇ ಎದುರುದಾರನು ಒದಗಿಸಿದ ವಿವರಗಳು, ಅಪಘಾತ ಉಂಟಾದ ರೀತಿಯನ್ನು ಸ್ಪಷ್ಟವಾಗಿ ಸಾಬೀತುಪಡಿಸುತ್ತವೆ.ನಿಶಾನೆ-ಆರ್ .2 ಮತ್ತು ಆರ್ .7 ಕ್ಕೆ ಪ್ರತಿಯಾಗಿ ನಿರುಪಾಧಿಕವಾದ ಯಾವುದೇ ಸಾಕ್ಷ್ಯವಿಲ್ಲ ಹಾಗೂ ನಿಶಾನೆ-ಆರ್ .2 ಮತ್ತು ಆರ್ .7 ಪ್ರಕಾರ ಈ ನಿರ್ಣಾಯಕ ಸಾಕ್ಷ್ಯವನ್ನು ಬದಲಾಯಿಸಲಾಗಿದ್ದು,

ಪೂರ್ತಿಯಾಗಿ ನಂಬಲರ್ಹವಲ್ಲದ ಮತ್ತು ಸತ್ಯಾಂಶವನ್ನು ಒಳಗೊಳ್ಳದ ಕ್ಲೇಮುದಾರನು ಮಂಡಿಸಿದ ದುರ್ಬಲ ಸಾಕ್ಷ್ಯವನ್ನು ಹೆಚ್ಚು ತೂಗಿ ನೋಡಲಾಗಿದೆ.ಕ್ಲೇಮುದಾರನು ಅಪಘಾತ ಚ ನಡೆದ ಸ್ಥಳವನ್ನು ಸಹ ಸ್ಥಳಾಂತರಿಸಿಬಿಟ್ಟಿದ್ದಾನೆ ಎಂಬುದು ವಿಮಾ ಕಂಪನಿಯು ಮಂಡಿಸಿದ ಖಂಡನಾ ಸಾಕ್ಷ್ಯದಿಂದ ತಿಳಿದುಬರುತ್ತದೆ.ಕ್ಲೇಮು ನಮೂನೆಯಲ್ಲಿ ಹೇಳಲಾದಂತೆ ಅಪಘಾತ ನಡೆದ ಸ್ಥಳ ಮತ್ತು ಪೊಲೀಸ್ ದಾಖಲೆಗಳಲ್ಲಿ ಹೇಳಿದಂಥ ಸ್ಥಳ ಸಂಪೂರ್ಣವಾಗಿ ಬೇರೆಯದೇ ಆಗಿದೆ. ಇದು ಮುಖ್ಯ ಪರಸ್ಪರ ವೈರುಧ್ಯವಾಗಿದ್ದು, ಇದೂ ಸಹ, ಅಪಘಾತದ ಆರೋಪಿತ ದಿನಾಂಕದಂದು ತಾನು ಬೈಕಿನ ಹಿಂದೆ ನಡೆದುಬರುತ್ತಿದ್ದುದಾಗಿ ನ್ಯಾಯಾಧಿಕರಣದ ಮುಂದೆ ಹೇಳಿಕೆ ನೀಡಿರುವ ಈ ಅಪಘಾತದ ಸಾಕ್ಷಿದಾರನಾಗಿರುವ ಪ್ರಾ.ಸಾ .4 ರ ಹೇಳಿಕೆಗೆ ಸಂಬಂಧಿಸಿದಂತೆ ಸಂಶಯವನ್ನು ಹುಟ್ಟುಹಾಕುತ್ತದೆ ಹಾಗೂ ಕ್ಲೇಮು ಅರ್ಜಿಯಲ್ಲಿ ಮತ್ತು ಪೊಲೀಸ್ ದಾಖಲೆಗಳಲ್ಲಿ ಆರೋಪಿಸಿದಂತೆ ಅಪಘಾತವು ಭಜನಕಟ್ಟೆ ಎಂಬ ಸ್ಥಳದಲ್ಲಿ ಉಂಟಾಗಿಲ್ಲವೆಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ.ಪ್ರಸ್ತುತ ಮೊಕದ್ದಮೆಯಲ್ಲಿ, ಕ್ಲೇಮುದಾರನು ಸ್ವತಃ ಬೈಕನ್ನು ಚಲಾಯಿಸುತ್ತಿದ್ದನು ಮತ್ತು ಸ್ವತಃ ಆತನ ನಿರ್ಲಕ್ಷ್ಯದ ಕಾರಣದಿಂದ ಅಪಘಾತ ಸಂಭವಿಸಿದೆ ಎಂಬುದನ್ನು ಸಾಬೀತುಪಡಿಸುವಲ್ಲಿ ವಿಮಾ ಕಂಪನಿಯು ಯಶಸ್ವಿಯಾಗಿದೆ.ಬೈಕಿನ ಮಾಲೀಕನೊಂದಿಗೆ ಶಾಮೀಲಾಗಿ ಕ್ಲೇಮು ಅರ್ಜಿಯನ್ನು ಸಲ್ಲಿಸಲಾಗಿದೆ ಹಾಗೂ ಮೊದಲನೇ ಎದುರುದಾರನು ನಡೆದುಕೊಂಡು ಬರುತ್ತಿದ್ದನು ಎಂದು ಹೇಳುವ ಮೂಲಕ ಸುಳ್ಳು ಮೊಕದ್ದಮೆಯನ್ನು ಪ್ರತಿವಾದಿಸಲಾಗಿದೆ.ಪ್ರತ್ಯಕ್ಷ ಸಾಕ್ಷ್ಯದಲ್ಲಿ, ತಾನು ರಾತ್ರಿ 10.15 ಗಂಟೆಗೆ ಗ್ರಾಹಕನನ್ನು ಭೇಟಿ ಮಾಡಿದುದಾಗಿ ವಿವರಣೆ ನೀಡಲು ಕ್ಲೇಮುದಾರನು ಪ್ರಯತ್ನಿಸಿದ್ದು, ಅಪಘಾತ ಸಂಭವಿಸಿರುವ ಆರೋಪಿತ ಸ್ಥಳವು ಆತನ ಮನೆಯಿಂದ 45 ಕಿ.ಮೀ. ದೂರದಲ್ಲಿದೆ.ರಾತ್ರಿ 10.15 ಗಂಟೆಯ ಸುಮಾರಿಗೆ ಆತನು ಯಾರ ಮನೆಗೆ ಭೇಟಿ ನೀಡಿದ್ದನೆಂಬ ವಿವರಗಳನ್ನು ತನಗೆ ಅನುಕೂಲಕರವಾಗಿ ತಿಳಿಸಿರುವುದಿಲ್ಲ.ಕ್ಲೇಮುದಾರನ ಮನೆಯು ಅಪಘಾತ ನಡೆದ ಸ್ಥಳದಿಂದ 45 ಕಿ.ಮೀ. ದೂರದಲ್ಲಿದ್ದಿದ್ದರೆ, ಮರಳಿ ತನ್ನ ಮನೆಗೆ ಆತನು ಉದ್ದಕ್ಕೂ ಹೇಗೆ ನಡೆದುಕೊಂಡು ಹೋಗಲು ಸಾಧ್ಯವೆಂಬುದನ್ನು ತಿಳಿಸಿರುವುದಿಲ್ಲ.ಇದು, ವಾಸ್ತವವಾಗಿ ಕ್ಲೇಮುದಾರನು ಆರೋಪಿತ ಅಪಘಾತದ ದಿನಾಂಕದಂದು ಬೈಕ್ ಚಲಾಯಿಸುತ್ತಿದ್ದನೆಂದು ಮತ್ತು ಆತನ ಸ್ನೇಹಿತನಾಗಿದ್ದ ಮೊದಲನೇ ಎದುರುದಾರನು ಕ್ಲೇಮುದಾರನಿಗೆ ಬೈಕನ್ನು ನೀಡಿದ್ದನು ಎಂದು ವಿಮಾ ಕಂಪನಿಯು ಪ್ರತಿವಾದವನ್ನು ಮಂಡಿಸಿದೆ.ನಿರ್ಣಯಕ್ಕೆ ಅನ್ವಯಿಸಬೇಕಾಗಿರುವ ಈ ವಿವರಗಳನ್ನು ವಾಸ್ತವದಲ್ಲಿ ಅ ನ್ಯಾಯಾಧಿಕರಣವು ನಿರ್ಲಕ್ಷಿಸಿದೆ.

15. ಎರಡನೇ ಎದುರದಾರನ ಪರ ಹಾಜರಾದ ನ್ಯಾಯವಾದಿಗಳು ಉಲ್ಲೇಖಿಸಿದ ತೀರ್ಪುಗಳು ಪ್ರಸ್ತುತ ಮೊಕದ್ದಮೆಗೆ ನೇರವಾಗಿ ಅನ್ವಯವಾಗುತ್ತವೆ.ವಿಮಾ ಕಂಪನಿಯು ಮೋಸವನ್ನು ಸಾಬೀತುಪಡಿಸುವಲ್ಲಿ ಯಶಸ್ವಿಯಾಗಿರುವುದರಿಂದ, ನ್ಯಾಯಾಲಯಕ್ಕೆ ಮೋಸ ಎಸಗುವಲ್ಲಿ ಪ್ರಮುಖ ಪಾತ್ರ ವಹಿಸಿರುವ ವಾಹನದ ಮಾಲೀಕನಿಗೆ ನಷ್ಟಭರ್ತಿ ಮಾಡಿಕೊಡಲು ಅವರು ಹೊಣೆಗಾರರಾಗುವುದಿಲ್ಲ.ಹಾಗಾಗಿ, ವಿಮಾ ಕಂಪನಿಯು ನ್ಯಾಯಾಲಯಕ್ಕೆ ಮೋಸ ಎಸಗಿದ ಕ್ಲೇಮುದಾರನಿಗೆ ಯಾವುದೇ ಪರಿಹಾರದ ಹಣ ಸಂದಾಯ ಮಾಡಲು ಹೊಣೆಗಾರರಾಗುವುದಿಲ್ಲ.ಮೊದಲನೇ ಎದುರುದಾರ-ಮಾಲೀಕನು ಪಾಲಿಸಿಯನ್ನು ತೆಗೆದುಕೊಂಡಾಗ್ಯೂ, ವಿಮೆ ಮಾಡಿಸಿದವನಿಗೆ ನಷ್ಟಭರ್ತಿ ಮಾಡಿಕೊಡಲು ವಿಮಾ ಕಂಪನಿಯ ಪರವಾಗಿ ಯಾವುದೇ ಬಾಧ್ಯತೆ ಇರುವುದಿಲ್ಲ ಮತ್ತು ಶಾಸನವು ವಿಮಾ ಕಂಪನಿಗೆ ಪರಿಹಾರ ಸಂದಾಯ ಮಾಡಲು ಕಡ್ಡಾಯಪಡಿಸುತ್ತದೆ.ವೀರಪ್ಪ ಮತ್ತು ಇನ್ನೊಬ್ಬರು ವಿರುದ್ಧ ಸಿದ್ದಪ್ಪ ಮತ್ತು ಇನ್ನೊಬ್ಬರು (ಮೇಅನ) ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ನಿರ್ಣಯಿಸಿದಂತೆ, ಸದರಿ ಶಾಸನಾತ್ಮಕ ಬಾಧ್ಯತೆಯು ವಜಾಗೊಳ್ಳುತ್ತದೆ.ಕೇಮುದಾರನಿಗೆ

ಪರಿಹಾರ ಸಂದಾಯ ಮಾಡಲು ವಿಮಾ ಕಂಪನಿಯ ಮೇಲೆ ಮೂರನೇ ಪಕ್ಷಕಾರನ ಹೊಣೆಗಾರಿಕೆ ಇರುವುದಿಲ್ಲ.ತದನುಸಾರವಾಗಿ, ವಿಮಾ ಕಂಪನಿಯು ಸಲ್ಲಿಸಿದ ಅಪೀಲನ್ನು ಪುರಸ್ಕರಿಸಲಾಗಿದೆ.

16. ನಿರ್ಣಾಯಕ ಖಂಡನಾ ಸಾಕ್ಷ್ಯವು, ಕ್ಲೇಮುದಾರನು ಸ್ವತಃ ಬೈಕನ್ನು ಚಲಾಯಿಸುತ್ತಿದ್ದನು ಮತ್ತು ಆತನ ನಿರ್ಲಕ್ಷ್ಯದ ಕಾರಣದಿಂದ ಆತನಿಗೆ 0 ಗಾಯಗಳುಂಟಾಗಿದ್ದವು ಎಂಬುದನ್ನು ಸ್ಪಷ್ಟವಾಗಿ ತೋರಿಸಿರುವುದರಿಂದ, ವಿಮಾ ಕಂಪನಿಯ ವಿರುದ್ಧವಾಗಲಿ ಅಥವಾ ಮೊದಲನೇ ಎದುರದಾರ ಮಾಲೀಕನ ವಿರುದ್ಧವಾಗಲಿ ಕ್ಲೇಮುದಾರನು ಸಲ್ಲಿಸಿದ ಕ್ಲೇಮು ಅರ್ಜಿಯನ್ನು ಸಮರ್ಥಿಸಲಾಗುವುದಿಲ್ಲ ಹಾಗೂ ತದನುಸಾರವಾಗಿ, ಕ್ಲೇಮುದಾರನು ಸಲ್ಲಿಸಿದ ಅಪೀಲು ವಜಾಗೊಳ್ಳಲು ಸೂಕ್ತವಾಗಿದೆ. ಮೇಲಿನ ಚರ್ಚೆಗಳ ಹಿನ್ನೆಲೆಯಲ್ಲಿ, ಈ ನ್ಯಾಯಾಲಯವು ರೂಪಿಸಿದ ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

17. ಮೇಲೆ ಹೇಳಿರುವ ಕಾರಣಗಳಿಗಾಗಿ, ಎಮ್‌ಎಫ್ಸಂಖ್ಯೆ: 7279/2016 ರಲ್ಲಿ ವಿಮಾ ಕಂಪನಿಯು ಸಲ್ಲಿಸಿದ ಅಪೀಲನ್ನು ಪುರಸ್ಕರಿಸಲಾಗಿದ್ದು, ಕ್ಲೇಮು ಅರ್ಜಿಯನ್ನು ವಜಾಗೊಳಿಸಲಾಗಿದೆ.ತತ್ಪರಿಣಾಮವಾಗಿ, ಪರಿಹಾರ ಹೆಚ್ಚಳವನ್ನು ಕೋರಿ ಎಂ.ಎಫ್.ಎ.ಸಂಖ್ಯೆ: 7110/2016 ರಲ್ಲಿ ಕ್ಲೇಮುದಾರನು ಸಲ್ಲಿಸಿದ ಅಪೀಲು ಸಹ ವಜಾಗೊಳ್ಳುತ್ತದೆ.